ಹಿತ್ತಲಗಿಡ


ಚಾತುರ್ಮಾಸಿಕ

ಸಂಪುಟ 5, ಸಂಚಿಕೆ 3, ಸೆಪ್ಟೆಂಬರ್-ಡಿಸೆಂಬರ್, 1999

'ಹಿತ್ತಲಗಿಡ' ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ಬಿಡಿ ಪತ್ರಿಕೆ : ರೂ. 20/-

ಆದ್ರಿ ಮಳೆ ಗುಡುಗಬಾರದೇಕೆ?



ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟುಹಾಕುವ ಪ್ರಯತ್ನ

ಹಸನಾದ ಕೃಷಿ ಮತ್ತು ಗ್ರಾಮೀಣ ಬದುಕಿಗಾಗಿ ಸಹಸ್ರಮಾನಕ್ಕೆ ಹಿತ್ತಲಗಿಡದ ಸಪ್ತ ಸೂತ್ರಗಳು.

ಸೂತ್ರ೧: ಪರಿಹಾರ ಮತ್ತು ಪರ್ಯಾಯಗಳತ್ತಲೇ ದೃಷ್ಟಿ

ಸಮಸ್ಯೆ, ತೊಂದರೆ, ನ್ಯೂನ್ಯತೆಗಳನ್ನು ಕೆದಕಿ, ಚಿಂತಿಸಿ ನಿಟ್ಟುಸಿರು ಬಿಡುತ್ತಾ ಆಕ್ರೋಶ ಹೋರಾಟಗಳಲ್ಲಿ ನಮ್ಮೆಲ್ಲಾ ವೇಳೆಯನ್ನು ಇದುವರೆಗೂ ವ್ಯಯಿಸಾಯಿತು. ಇದನ್ನು ಸ್ವಲ್ಪ ಬದಿಗೆ ತಳ್ಳಿ, ಸಮೃದ್ಧ ಕೃಷಿ, ಹಸನಾದ ಗ್ರಾಮೀಣ ಬದುಕು, ಸ್ವಚ್ಛ ಪರಿಸರಕ್ಕಾಗಿ, ಪರಿಹಾರ ಮತ್ತು ಪರ್ಯಾಯಗಳನ್ನು ಹುಡುಕುತ್ತ ನಮ್ಮ ಅಮೂಲ್ಯ ಶಕ್ತಿಯನ್ನು ಸ್ಪಷ್ಟ ದಾರಿಯಲ್ಲಿ ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸುವುದು, ಸಹಸ್ರಮಾನದ ಪ್ರಾರಂಭದಲ್ಲಿ ನಾವು ಚಿಂತಿಸಲು ಸೂಕ್ತವಾದ ಮೊದಲ ವಿಚಾರವಾಗಿರುತ್ತದೆ.

ಸೂತ್ರ೨: ಜನಶಕ್ತಿಯ ಮೂಲಕವೇ ಪ್ರಗತಿ

ಪರಿಹಾರ ಮತ್ತು ಪರ್ಯಾಯಗಳನ್ನು ಕಾರ್ಯರೂಪಕ್ಕೆ ತರಲು ರಾಜ್ಯ ಶಕ್ತಿಯ ಮೇಲೆ ಇದುವರೆಗೂ ಅತಿಯಾಗಿ ಅವಲಂಬಿಸಿ ನಿರಾಸೆ, ವಿಫಲತೆಯನ್ನು ಅನುಭವಿಸುವಂತಾಯ್ತು. ಈಗ, ಬದಲಾಗುತ್ತಿರುವ ವಾತಾವರಣದಲ್ಲಿ, ಜಾಗತೀಕರಣ, ಉದಾರೀಕರಣ, ಖಾಸಗಿಕರಣಗಳ ಹಿನ್ನೆಲೆಯಲ್ಲಿ ಈ ಜವಾಬ್ದಾರಿಯನ್ನು ಮಾರುಕಟ್ಟೆ ಶಕ್ತಿಗಳಿಗೆ, ಜಾಗತಿಕ ಬಂಡವಾಳಕ್ಕೆ ಬಹುರಾಷ್ಟ್ರೀಯ ಕಂಪನಿಗಳಿಗೆ ಒಟ್ಟಾರೆ ಹಣ ಶಕ್ತಿಗೆ ವಹಿಸಿಕೊಡುತ್ತಿರುವುದು ನಮಗಾರಿಗೂ ಒಪ್ಪಿಗೆಯಾಗುತ್ತಿಲ್ಲ. ಈಗ, ಈ ಪರಿಹಾರ ಮತ್ತು ಪರ್ಯಾಯಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯನ್ನು ಜನಶಕ್ತಿಗೆ ವಹಿಸಿಕೊಡುವುದು ಅತ್ಯಂತ ಸೂಕ್ತವಾಗಿದೆ. ಈ ಜನಶಕ್ತಿಯ ಸೂಕ್ತ ಸಂಘಟನೆಗೆ ಒಂದು ನಿಜ ಅರ್ಥದ ಸಹಕಾರ ತತ್ವದ ಬಳಕೆಯೇ ಅತ್ಯಂತ ಸೂಕ್ತವಾಗಿದೆ. ಜೊತೆಗೆ ಪಂಚಾಯ್ತಿರಾಜ್ ವ್ಯವಸ್ಥೆಯ ಮೂಲಕದ ನಿಜವಾದ ರಾಜಕೀಯ ವಿಕೇಂದ್ರಿಕರಣ, ಆ ಮೂಲಕ ನೈಸರ್ಗಿಕ ಸಂಪನ್ಮೂಲಗಳಾದ ಜಲ, ನೆಲ, ಅರಣ್ಯ, ಜೀವವಿವಿಧತೆ, ಕಲ್ಲು, ಖನಿಜಗಳೆಲ್ಲವುಗಳ ಒಡೆತನ, ಬಳಕೆ, ಹಂಚಿಕೆಯ ವಿಚಾರವನ್ನೂ ಸ್ಥಳೀಯ ಸಂಸ್ಥೆಗಳಿಗೆ ವಹಿಸಿಕೊಡುವುದು ಜನಶಕ್ತಿಯ ಅತ್ಯಂತ ಪರಿಣಾಮಕಾರಿ ಪ್ರದರ್ಶನಕ್ಕೆ ಸಹಕಾರಿಯಾಗುವುದರಲ್ಲಿ ಸಂಶಯವಿರದು. ಇಂತಹ ಅಗತ್ಯ ವಾತಾವರಣಗಳಿಲ್ಲದಿರುವಾಗಲೂ ಮೂಡಿಬಂದ ಬಿಜಾಪುರದ ಚಿಕ್ಕ ಪಡಸಲಗಿ ಬ್ಯಾರೇಜ್‌ನಂತಹ, ಕೇರಳದ ಪಾತಂಪಾರದ ಸಮುದಾಯ ವಿದ್ಯುತ್ ತಯಾರಿಕೆಗಳಂತ ಜನಶಕ್ತಿಯ ಯಶಸ್ವಿ ಪ್ರಯೋಗಗಳು ನಮ್ಮ ಕಣ್ಣು ತೆರೆಸಬೇಕಾಗಿದೆ.

ಸೂತ್ರ೩: ಸ್ಥಳೀಯತೆಯೇ ಪ್ರಮುಖವಾಗಿರುವ ಒಳಗಿನಿಂದೇಳುವ ಪ್ರಗತಿ

ಜನಶಕ್ತಿಯ ಸಮರ್ಥ ಬಳಕೆಗೆ ಒಂದು ಸೂಕ್ತ ಅಭಿವೃದ್ಧಿ ಪರಿಕಲ್ಪನೆ ಅಗತ್ಯವಾಗುತ್ತದೆ. ಇದು ಜನರಿಂದ, ಜನರದ್ದೇ ಆದ ಜ್ಞಾನ ತಂತ್ರಜ್ಞಾನ ಆದಾರಿತ, ಅವರ ಬಳಿಯಲ್ಲೇ ಇರುವ ಸಂಪನ್ಮೂಲಗಳ ಮೇಲೆ ಒಟ್ಟಾರೆ ಸ್ಥಳೀಯ ವಸ್ತು ವಿಚಾರಗಳ ಮೇಲೇ ಅವಲಂಬಿತವಾದಂತಹ ಒಳಗಿನಿಂದಲೇ ರೂಪಗೊಳ್ಳುವಂತಹ ಅಭಿವೃದ್ಧಿಯಾಗಿರಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಹಿತ್ತಲಗಿಡ, ಇದೂವರೆಗೂ ಒತ್ತುಕೊಡುತ್ತಾ ಬಂದಿರುವ ದೇಶೀಯ ಜ್ಞಾನ, ತಂತ್ರಜ್ಞಾನ ವ್ಯವಸ್ಥೆ, ಸ್ಥಳೀಯ ಸಂಪನ್ಮೂಲಗಳು, ತಳಮಟ್ಟದ ಜನರ ಅನುಶೋಧನೆಗಳು, ಜೀವವಿವಿಧತೆಗಳೆಲ್ಲಾ ಉಪಯುಕ್ತವಾಗಲಿವೆ. ಇದಕ್ಕೆ ಪೂರಕವಾದ, ಅಡಿಕೆ ಪತ್ರಿಕೆಯ ಶ್ರೀ ಪಡ್ರೆ ಎತ್ತಿರುವ ಒಂದು ಸಂವಾದವನ್ನು ಈ ಸಂಚಿಕೆಯಲ್ಲಿ ಕೊಡಲಾಗಿದ್ದು, ಇದು ಒಳಗಿನಿಂದೇಳುವಂತಹ ಅಭಿವೃದ್ಧಿ ಮಾದರಿಯ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಬಹುದಾಗಿದೆ.

ಸೂತ್ರ ೪: ವ್ಯಕ್ತಿ ಸಮುದಾಯ ಕೇಂದ್ರೀಕೃತವಾದ ಅಭಿವೃದ್ಧಿ

ಒಳಗಿನಿಂದೇಳುವ ಪ್ರಗತಿಕೂಡ ವ್ಯಕ್ತಿ ಸಮುದಾಯ ಕೇಂದ್ರೀಕೃತವಾಗಿರಬೇಕೇ ಹೊರತು ಅವರನ್ನೇ ಬದಿತಳ್ಳಿ ತಂತ್ರಜ್ಞಾನ ಕೇಂದ್ರೀಕೃತವಾಗಿರಬಾರದು. ಅದರಲ್ಲೂ, ಮಳೆ ಆಶ್ರಯದ ಬಡ ರೈತರು, ಗ್ರಾಮೀಣ ಮಹಿಳೆಯರು, ಬುಡಕಟ್ಟು, ಆದಿವಾಸಿಗಳು, ನಾಟೀ ಪಶುಚಿಕಿತ್ಸಕರು, ಗ್ರಾಮೀಣ ಕರಕುಶಲಕರ್ಮಿಗಳು, ಇತ್ಯಾದಿ ತಳ ಮಟ್ಟದ ವ್ಯಕ್ತಿ\ಸಮುದಾಯಗಳು ಇಲ್ಲಿ ಅತ್ಯಂತ ಗೌಣವಾಗಿದ್ದು ಈ ಎಲ್ಲ ಜನರ ಸಂಸ್ಕೃತಿ, ಪರಿಸರ, ಬದುಕಿನ ರೀತಿ ನೀತಿಗಳಿಗೆ ಅಪಚಾರವಾಗದ ರೀತಿಯಲ್ಲಿ ಪರ್ಯಾಯ ಪ್ರಗತಿಯ ಮಾದರಿಯನ್ನು ಚಿಂತಿಸಬೇಕಾಗಿದೆ. ಕಾರಣ ಈ

ಒಳಗಿನಿಂದೇಳುವ ಪ್ರಗತಿಗೆ ಅಗತ್ಯವಾದ ಜ್ಞಾನ, ಸಂಪತ್ತು, ಅನ್ವೇಷಣೆಗಳೆಲ್ಲಾ ಈ ಮೂಲದ ವ್ಯಕ್ತಿ\ಸಮುದಾಯಗಳಿಂದಲೇ ಬರುತ್ತಿರುವುದರಿಂದ ಈ ಅಭಿವೃದ್ಧಿ ಮಾದರಿಯ ಪ್ರತಿ ಫಲದ ಮೊದಲ ವಾರಸುದಾರರೂ ಅವರೇ ಆಗಲಿರುವರು.

ಸೂತ್ರ ೫: ಸಮಾನತೆಯೇ ಗೌಣವಾಗಿರುವ ಪ್ರಗತಿ

ಆರ್ಥಿಕವಾಗಿ ಅತ್ಯಂತ ಸಮರ್ಥವಾದಂತಹ, ಸಾಮಾಜಿಕವಾಗಿ ಸಮಾನವಾದಂತಹ ಹಾಗೇ ಪರಿಸರ ದೃಷ್ಟಿಯಿಂದ ದೀರ್ಘಾವದಿಯಲ್ಲಿ ಸುಸ್ಥಿರವಾದಂತಹ ಪ್ರಗತಿಯೇ ಇಂದಿನ ಅಗತ್ಯವಾಗಿದೆ. ಆದರೆ ರಾಜಿ, ಹೊಂದಾಣಿಕೆಯ ವಿಚಾರ ಬಂದಾಗ ಆರ್ಥಿಕ ಲಾಭದಾಯಕತೆ ಮತ್ತು ಸಮರ್ಥತೆಗಳೇ ಪ್ರಮುಖವಾಗಿ ಸಾಮಾಜಿಕ ಸಮಾನತೆ ಮತ್ತು ಪರಿಸರ ದೃಷ್ಟಿಯ ಸುಸ್ಥಿರತೆ ಹಿಂದೆ ಬೀಳುವಂತಾಗವುದನ್ನು ನಾವು ಕಾಣುತ್ತಿರುವೆವು. ಹಾಗೇ ದೀರ್ಘಾವದಿಯ ಸುಸ್ಥಿರತೆಗೆ ಒತ್ತುಕೊಡುವಂತಹ ಸಂದರ್ಭದಲ್ಲಿ ಉಳಿದೆರಡು ಗುರಿಗಳನ್ನು ಕಡೆಗಣಿಸುತ್ತಿರುವುದನ್ನೂ ಕಾಣುತ್ತೇವೆ. ಇವೆರೆಡರ ಬದಲಿಗೆ, ಅಸಮಾನತೆ ತುಂಬಿತುಳುಕುತ್ತಿರುವ ಭಾರತದಂತಹ ಪರಿಸ್ಥಿತಿಯಲ್ಲಿ ಸಾಮಾಜಿಕ ಸಮಾನತೆಯನ್ನು ಮೂಲವಾಗಿಟ್ಟುಕೊಂಡು ತತ್‌ಕ್ಷಣದ ಆರ್ಥಿಕ ಸಮರ್ಥತೆಗೂ ದೀರ್ಘಾವದಿಯ ಸುಸ್ಥಿರತೆಗಳನ್ನು ಹೊಂದಾಯಿಸಿಕೊಳ್ಳುವಂತಹ ಪ್ರಗತಿಯ ಮಾದರಿ ಇಲ್ಲಿ ಸೂಕ್ತವಾಗಿರುತ್ತದೆ.

ಸೂತ್ರ ೬: ಭಾರತದ ಮುಂದಾಳತ್ವದ ತೃತೀಯ ಜಗತ್ತಿನ ದೃಷ್ಟಿಕೋನ ಹೊಂದಿರುವ ಜಾಗತೀಕರಣ

ಇಂದು ಯಾವುದೇ ರೀತಿಯ ಪ್ರಗತಿಯ ಕಲ್ಪನೆಯನ್ನೂ ದಟ್ಟವಾಗಿ ಬೀಸುತ್ತಿರುವ ಆ ಜಾಗತೀಕರಣದ ಗಾಳಿಯಿಂದ ದೂರವಿಟ್ಟು ವಿವೇಚಿಸುವುದು ಅಸಾಧ್ಯದ ಮಾತಾಗಿರುತ್ತದೆ. ಅಮೇರಿಕಾ ಮುಂದಾಳತ್ವದಲ್ಲಿ ಅಸಮಾನತೆಯನ್ನು ಒಡಲಲ್ಲಿಟ್ಟುಕೊಂಡು ಜಗತಿನಾದ್ಯಂತ ನವ ವಸಾಹತು ಶಾಹಿಯನ್ನು ಹುಟ್ಟುಹಾಕಲು ಹವಣಿಸುತ್ತಿರುವ ಸದ್ಯದ ಜಾಗತೀಕರಣ ಪ್ರಕ್ರಿಯೆಯನ್ನು ಒಪ್ಪುವುದು ಅಸಾಧ್ಯದ ಮಾತಾಗಿರುತ್ತದೆ. ಬದಲಿಗೆ, ಸಮಾನತೆ ತತ್ವವನ್ನು ಬಗಲಲ್ಲಿಟ್ಟುಕೊಂಡು ಜಗತ್ತಿನಾದ್ಯಂತದ ಬಡಜನತೆಗೆ ಅನ್ನ, ಘನತೆಗಳನ್ನು ನೀಡುವಂತಹ, ಅವರ ಸುತ್ತಲಿನ ಪರಿಸರ, ಸಂಸ್ಕೃತಿ, ಜೀವವೈವಿದ್ಯತೆಗೆ ಕೆಡುಕು ಬಾರದ ರೀತಿ ವ್ಯಾಪಾರ ತಂತ್ರಜ್ಞಾನ ಜಾಗತೀಕರಣಗಳನ್ನು ಹುಟ್ಟುಹಾಕುವತ್ತ ಮನಸ್ಸುಮಾಡುವುದು ಇಂದಿನ ಅಗತ್ಯವಾಗಿರುತ್ತದೆ. ಈ ರೀತ್ಯ ಬದಲೀ ಜಾಗತಿಕರಣಕ್ಕೆ ತೃತೀಯ ಜಗತ್ತಿನ ಬಡ ಜನತೆಯನ್ನೆಲ್ಲಾ ಸಂಘಟಿಸುವುದು ಅತ್ಯಂತ ತುರ್ತು ಅಗತ್ಯವಾಗಿದ್ದು ಇದರ ಜವಾಬ್ದಾರಿ, ಮುಂದಾಳತ್ವವನ್ನು ವಹಿಸಲು ಭಾರತಕ್ಕಿಂತ ಸೂಕ್ತ ರಾಷ್ಟ್ರ ಮತ್ತೊಂದಿರಲಾರದು.

ಸೂತ್ರ೭: ನಾಟೀ ಬದುಕಿನ ರೀತಿ ಮತ್ತು ಸಾವಯುವ ಅಭಿರುಚಿ.

ಇಂದು ಎಲೆಕ್ಟ್ರಾನಿಕ್ಸ್ ಮಾಧ್ಯಮಗಳು ನವ ಜಾಗತೀಕರಣ ಶಕ್ತಿಗಳ ಕೈವಶವಾಗಿ, ಅನುಭೋಗ ಸಂಸ್ಕೃತಿಯನ್ನು ಏಕಮುಖವಾಗಿ ತೃತೀಯ ಜಗತ್ತಿನ ಮೇಲೆ ಹೇರುತ್ತಿರುವುದರ ವಿರುದ್ಧವಾಗಿ, ನಮ್ಮ ಗಿರಿಜನರ, ವೈಯಕ್ತಿಕ ಆಸ್ತಿ, ಲಾಭಗಳಿಗೆ ಆಸೆ ಪಡದೇ ನಿಸರ್ಗದೊಡನೆ ಹೊಂದಿಕೊಂಡು, ಸಾಮೂಹಿಕವಾಗಿ ಬಾಳುವಂತಹ ನಾಟೀ ಸಂಸ್ಕೃತಿಗಳ ಬದುಕಿನ ರೀತಿ, ಜೀವನ ಮೌಲ್ಯಗಳು ಗಟ್ಟಿಗೊಂಡು ಪಸರಿಸುವಂತಾಗಲು ಪ್ರಯತ್ನ ಅತ್ಯಗತ್ಯವಾಗಿದೆ. ಹಾಗೇ ನಮ್ಮ ಅಭಿರುಚಿಯನ್ನು ದೇಶೀಯ ಕಲೆ, ನಾಟೀ ಮತ್ತು ವೈವಿದ್ಯ ಆಹಾರ ಮತ್ತು ಸಾವಯುವ ಉತ್ಪನ್ನಗಳತ್ತ ತಿರುಗಿಸುವುದರಿಂದ ಆರೋಗ್ಯಕರ ಜೀವನ ಶೈಲಿಯನ್ನು ನಮಗೆ ಒದಗಿಸಿಕೊಡುವುದು ಮಾತ್ರವಲ್ಲ ಆ ದೇಶೀಯ ಸಂಸ್ಕೃತಿಗಳ ಸಂರಕ್ಷಣೆ ಹಾಗೇ ನಮ್ಮ ಪರಿಸರವನ್ನು ಕಾಪಾಡಲೂ ಸಾಧ್ಯವಾಗುತ್ತದೆ.

ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ

ಆದ್ರಿ ಮಳೆ ಗುಡುಗಬಾರದೇಕೆ?

ಮುಂದಿನ ಆರು ಮಳೆ ಬರದೆ, ಹುಲ್ಲು ನೀರಿಲ್ಲದೆ ದನಕರು ಉಪವಾಸ ಬೀಳಲಿ. ಆಗಲಾದರೂ ನನ್ನ ಗಂಡ ಮನೆಗೆ ಬರದೇ ಇರುತ್ತಾನ?" ಎಂದು ಶಾಪಕೊಡುತ್ತಾಳೆ.

ಆದ್ರಿ ಮಳೆ ಬರುವಾಗ ಗುಡುಗಬೇಕು. ಹೋಗುವಾಗ ಗುಡುಗಬೇಕು. ಮಧ್ಯೆದಲ್ಲಿ ಗುಡುಗಬಾರದು. ಒಂದು ವೇಳೆ ಗುಡಿಗಿದರೆ, ಮುಂದಿನ ಆರು ಮಳೆಗೆ ಕೇಡು ಎಂದು ರೈತರು ಇವತ್ತಿಗೂ ನಂಬತ್ತಾರೆ.

ಕಥೆ ಹೇಳಿದವರು: ಮಂಗಮ್ಮ, ಮಾದೇಹಳ್ಳಿ,
ಮುಳಬಾಗಿಲು ತಾ॥
ಸಂಗ್ರಹ: ಜಿ.ಕೃಷ್ಣಪ್ರಸಾದ್.
ನೆರವು: ಗ್ರಾಮವಿಕಾಸ, ಮುಳಬಾಗಿಲು.

ಭತ್ತದ ಗದ್ದೆಯ ಹುಳಗಳಿಗೆ ಹಗ್ಗದ ಏಟು:

ನಾಟಿ ಮಾಡಿದ ಭತ್ತ ಬೆಳೆಯುತ್ತಿದ್ದಂತೆಯೇ ಕಾಟ ನೀಡುವ ಕೀಟಗಳು ಹಲವಾರು. ಎಲೆ ತಿನ್ನುವ, ಎಲೆ ಕತ್ತರಿಸುವ, ಸುರುಳಿ ಸುತ್ತುವ ಹುಳಗಳ ಕಾಟ. ಕಾಟ ಕೊಡುವ ಕೀಟಗಳಿಂದ ಭತ್ತದ ಗಿಡಗಳನ್ನು ಪಾರು ಮಾಡಲು ಅಸ್ಸಾಂನ ರೈತರು ಕಂಡುಕೊಂಡಿದ್ದು ಒಂದು ಸರಳ ಉಪಾಯ ಹೀಗಿದೆ.

ಉದ್ದದ ಗೋಣಿಹಗ್ಗ ಅಥವಾ ಹುರಿಹಗ್ಗಕ್ಕೆ ಸೀಮೆ ಎಣ್ಣೆಯನ್ನು ಚೆನ್ನಾಗಿ ಸವರಿ, ಹಗ್ಗದ ಎರಡೂ ತುದಿಗಳನ್ನು ಒಬ್ಬೊಬ್ಬರು ಹಿಡಿದುಕೊಂಡು ಗದ್ದೆಯ ಆಚೀಚೆಯ ಬದಿಗಳಲ್ಲಿ ನಿಂತು ಹಗ್ಗವನ್ನು ಗಿಡಗಳ ಮೇಲೆ ಎಳೆಯುತ್ತಾ ಬಂದಂತೆ ಸೀಮೆ ಎಣ್ಣೆ ಗಿಡಗಳಿಗೆ ಸವರಿಕೊಳ್ಳುತ್ತದೆ. ಹೀಗೆ ತೆಳುವಾಗಿ ಹರಡಿದ ಸೀಮೆ ಎಣ್ಣೆಯಿಂದ ಹುಳುಗಳು ಉದುರಿ ಕೆಳಗೆ ಬೀಳುತ್ತವೆ. ಒಟ್ಟಿನಲ್ಲಿ ಸುಲಭದಲ್ಲಿ ಹುಳು ಮತ್ತು ಕೀಟ ನಿಯಂತ್ರಣ.

ಈ ಮೇಲಿನ ತತ್ವವನ್ನೇ ಅನುಸರಿಸಿ,

–ಹತ್ತು ಮಿ.ಲಿ.ಯಷ್ಟು ಸೀಮೆ ಎಣ್ಣೆ ೫ರಿಂದ ೬ಲೀ. ನಷ್ಟು ನೀರಿನೊಂದಿಗೆ ಬೆರಸಿ, ಭತ್ತದ ಗಿಡಗಳ ಮೇಲೆ ತೆಳುವಾಗಿ ಸಿಂಪಡಿಸುವುದರಿಂದ ಕೀಟ ಹತೋಟಿ ಸಾಧ್ಯ. ಸೀಮೆ ಎಣ್ಣೆಯ ಬದಲು ಹೊಗೆಸೊಪ್ಪಿನ ದ್ರಾವಣವನ್ನು ತೆಳುವಾಗಿ ಸಿಂಪಡಿಸುವುದರಿಂದಲೂ ಕೀಟ ಹತೋಟಿ ಮಾಡಬಹುದು.

ಹಕ್ಕಿಗಳ ಕಾಟ ತಪ್ಪಿಸಲು ಹಾವು!

ಇದೇನಪ್ಪಾ, ಹಕ್ಕಿ ಕಾಟ ತಪ್ಪಿಸಿ, ಹಾವಿನ ವಿಷಕ್ಕೆ ಸಿಕ್ಕಿ ಬೀಳುವುದೇ? ಹಾಗಲ್ಲಾ, ಹಾವು ನಿಜವಾದದ್ದಲ್ಲ. ಎಣ್ಣೆ ಬೀಜದ ಕಾಳಿನ ಬಿತ್ತನೆಯ ನಂತರ ಕಾಳುಗಳನ್ನು ಎತ್ತಿ ತಿಂದು ಕಾಟ ಕೊಡುವ ಹಕ್ಕಿಗಳನ್ನು ಓಡಿಸಲು ಅಸ್ಸಾಂನ ಜನರು ಉತ್ತರ ಹುಡುಕಿದ್ದು ಕೆಸುವಿನ ದಂಟಿನಲ್ಲಿ. ಕೆಸುವಿನ ದಂಟುಗಳನ್ನು ಕತ್ತರಿಸಿ ಹೊಲದಲ್ಲಿ ಅಲ್ಲಲ್ಲಿ ಹರಡುತ್ತಾರಂತೆ. ಕಪ್ಪನೆಯ ಈ ದಂಟುಗಳು ಹಾವಿನಂತೆ ಕಂಡು ಹೆದರಿ, ಹಕ್ಕಿಗಳು ಮತ್ತೆ ಅತ್ತ ಕಡೆ ತಿರುಗದೆ ಹಾರಿಹೋಗುವುವಂತೆ.

ಟೊಮೆಟೋ ಗಿಡಗಳ ವೈರಸ್ ಹತೋಟಿ:

ಎಣ್ಣೆ ತೆಗೆದು ಉಳಿಯುವ ಬೇವಿನ ಹಿಂಡಿ, ಸಾಸಿವೆ ಹಿಂಡಿ ಇವುಗಳನ್ನು ಪುಡಿ ಮಾಡಿ ಟೊಮೆಟೋ ಗಿಡಗಳ ಬುಡಕ್ಕೆ ಹಾಕುವುದರಿಂದ ಅವುಗಳಿಗೆ ವೈರಸ್ ಕಾಯಿಲೆ ಬರುವುದನ್ನು ತಡೆಗಟ್ಟಬಹುದೆಂಬುದು ಉತ್ತರ ಪ್ರದೇಶದ ರೈತರ ಅನುಭವ.

ಹತ್ತಿಯಲ್ಲಿ ಕೀಟ ಹತೋಟಿ:

ಹಿಪ್ಪೆ (*Madhuca indica*) ಮತ್ತು ಹುಣಿಸೆ (*Tamarindus indica*) ಮರದ ಸಿಪ್ಪೆಗಳಿಂದ ಮಾಡಿದ ದ್ರಾವಣವನ್ನು ಹತ್ತಿ ಗಡಗಳ ಮೇಲೆ ಸಿಂಪರಿಸುವುದರಿಂದ ಹತ್ತಿಗೆ ಬೀಳುವ ಹುಳುಗಳನ್ನು ನಿಯಂತ್ರಿಸಬಹುದು. ಹುಳುಗಳು ಹತೋಟಿಗೆ ಬರದೇ ಇದ್ದಲ್ಲಿ, ಒಂದು ವಾರದ ನಂತರ ಮತ್ತೊಮ್ಮೆ ಸಿಂಪರಿಸಬಹುದು. ಆದರೆ, ಸಿಂಪರಣೆ ಅತಿಯಾದಲ್ಲಿ ಬೇರುಗಳು ಸುಟ್ಟುಹೋಗುವ ಸಾಧ್ಯತೆಯೂ ಇರುತ್ತದೆ.

ಕಾಂಡ ಕೊರೆಯುವ ಹುಳುಗಳ ನಿಯಂತ್ರಣ:

–ಒಂದೆರಡು ದಿನ ಬತ್ತದ ಗದ್ದೆಯಲ್ಲಿ ಸಾಕಷ್ಟು ಚೆನ್ನಾಗಿ ನೀರು ಕಟ್ಟುವುದರಿಂದ ಹುಳುಗಳು ನಿಯಂತ್ರಣಕ್ಕೆ ಬರುತ್ತವೆ.

–ಆಡಿನ ಹಿಕ್ಕೆಗಳನ್ನು ಗದ್ದೆಯ ಸುತ್ತಲೂ ಹರಡಿದಾಗ ಹುಳುವಿನ ಬಾಧೆ ಕಡಿಮೆಯಾಗುತ್ತದೆ.

–ಬೇವು ಮತ್ತು (*Dichrocephala lalifolia*) ಎಲೆಗಳನ್ನು ಗದ್ದೆಯಲ್ಲಿ ಹರಡಿದಾಗಲೂ ಹುಳು ನಿಯಂತ್ರಣಕ್ಕೆ ಬರುತ್ತದೆ.

–ಮಾನಕ (*Alocasia indica*)ದ ಕೊಂಬೆ ಮತ್ತು ಎಲೆಗಳನ್ನು ಕತ್ತರಿಸಿ ಹಾಕುವುದರಿಂದ ಕೂಡಾ ಹುಳುಗಳು ಹತೋಟಿಗೆ ಬರುತ್ತವೆ ಎಂಬುದು ಅಸ್ಸಾಂನ ರೈತರ ಅನುಭವ.

ಮೂಲ: ಹನೀಬೀ ೧೦ (೩) ೧೯೯೯

ಗಿಡಕ್ಕೆ ಗಿಡವೇ ಮದ್ದು:

ಗಿಡಕ್ಕೆ ರಾಸಾಯನಿಕಗಳೇಕೆ ? ಗಿಡಕ್ಕೆ ಗಿಡವೇ ಮದ್ದು ಎಂಬ ಜ್ಞಾನೋದಯವಾಗಿದೆಯಂತೆ ತಮಿಳುನಾಡಿನ ಸೇಲಮುತ್ತುವಿಗೆ. ಸೇಲಮುತ್ತುವಿನ ಉದ್ಯೋಗವೆಂದರೆ ಗಿಡಗಳಿಗೆ ಔಷಧಿ ಸಿಂಪರಿಸುವುದು. ರೈತರು ಹೇಳಿದ ರಾಸಾಯನಿಕ ಔಷಧಿಗಳನ್ನು ಬೆರೆಸಿ ಕೂಡಾ ಆತ ಸಿಂಪರಿಸ ಬೇಕಾಗಿತ್ತು. ಈ ಔಷಧಿಗಳ ಸಿಂಪರಣೆಯ ಕೆಲಸದಿಂದಾಗಿ ಆತನಿಗೆ ತಲೆನೋವು, ತಲೆತಿರುಗುವುದು ಸಾಮಾನ್ಯ ತೊಂದರೆಯಾಗಿತ್ತು. ಹೀಗೆ ಕಾಯಿಲೆ ಹೇಳುತ್ತಾ ವೈದ್ಯರ ಬಳಿಗೆ

ಹೋದಾಗ ; ವೈದ್ಯ ಡಾ। ನಟರಾಜ್ ಅವನಿಗೆ ಔಷಧಿ ಕೊಡುವುದರ ಜೊತೆಗೆ ಅವನ ಸಮಸ್ಯೆ ಪರಿಹಾರವಾಗುವಂತಹ ಸಲಹೆಯನ್ನು ನೀಡಿದರಂತೆ. ಪಡುಕೋಟ್ಟೈಯಲ್ಲಿನ ನೇಚರ್ ಟ್ರಸ್ಟ್ ಸಂಸ್ಥೆಯ ಸಂಪರ್ಕವಿದ್ದ ಡಾ। ನಟರಾಜ್ ತಾವು ತಿಳಿದಿದ್ದ ಒಂದು ಗಿಡಮೂಲಿಕೆಗಳ ಮದ್ದನ್ನು ಸೇಲಮುತ್ತುವಿಗೆ ತಿಳಿಸಿ ರಾಸಾಯನಿಕ ಔಷಧಿಗಳ ಬದಲಿಗೆ ಗಿಡಗಳಿಗೆ ಈ ಗಿಡಮೂಲಿಕೆಗಳ ಔಷಧಿಯನ್ನೇ ಸಿಂಪರಿಸುವಂತೆ ಸಲಹೆ ಮಾಡಿದರಂತೆ. ಅವರು ಹೇಳಿದ ಮದ್ದು ಹೀಗಿದೆ:

೩ ಕೆ.ಜಿ. ಲಕ್ಕಿಲಿ ಗಿಡ ಎಲೆ (*Vitex negundo*), ೩ ಕೆ.ಜಿ. ವಿಷಮಧಾರಿ ಕುಂಡಲಿ ಎಲೆ (*Clerodendron inerme*), ೨ ಕೆ.ಜಿ ಲೋಳೆ ಸರ ಎಲೆ (*Aloe vera*), ೩ ಕೆ.ಜಿ. ಬೇವಿನ ಬೀಜ ಇವೆಲ್ಲವನ್ನೂ ಒಟ್ಟಾಗಿ ಚೆನ್ನಾಗಿ ಪುಡಿ ಮಾಡಿ ೧೦೦ಲೀಟರ್ ನೀರಿನಲ್ಲಿ ಬೆರಸಿ ಒಂದು ಎಕರೆಗೆ ಸಿಂಪರಣೆ ಮಾಡಲು ಬಳಸಬಹುದು. ಆದರೆ ಈ ರೀತಿ ಸಿದ್ಧ ಪಡಿಸಿದ ಮಿಶ್ರಣವನ್ನು ಸಂಗ್ರಹಿಸಿ ಇಡುವಂತಿಲ್ಲ, ಅದೇ ದಿನ ಬಳಸಬೇಕು. ಈ ಗಿಡಮೂಲಿಕೆಗಳ ಔಷಧಿಗೆ ಈರೋಡ್ ಜಿಲ್ಲೆಯಲ್ಲಿ ಒಳ್ಳೆಯ ಬೇಡಿಕೆಯಂತೆ. ಈ ಔಷಧಿ ಸಿದ್ಧಪಡಿಸಿ ಸಿಂಪರಿಸುವುದರಿಂದ ಸೇಲಮುತ್ತುವಿನ ಸಮಸ್ಯೆ ಪರಿಹಾರವಾಗಿದೆಯಂತೆ. ಜೊತೆಗೇ ಈ ಔಷಧಿ ತಯಾರಿಸಿ ಸಿಂಪರಿಸುವುದರಿಂದ ದಿನವೊಂದಕ್ಕೆ ೫೦೦ರೂಪಾಯಿ ಸಂಪಾದನೆಯೂ ಆಗುತ್ತಿದೆಯಂತೆ.

ಮಾಹಿತಿ–ಸೇಲಮುತ್ತು,
ಈರೋಡು ಜಿಲ್ಲೆ, ತಮಿಳುನಾಡು.

ತೆಂಗಿನ ಮರಗಳಲ್ಲಿ ರಸ ಸೋರುವ ರೋಗದ ನಿವಾರಣೆ

ಆರೋಗ್ಯವಾಗಿರುವ ಮರಗಳಲ್ಲಿ ೬ ತಿಂಗಳು ಮೊದಲೇ ಗೊನೆಗಳಲ್ಲಿ ಗಾತ್ರ ಕಡಿಮೆಯಾಗಿ ಹರಳು ಬೀಳಲು ಪ್ರಾರಂಬಿಸುತ್ತವೆ ಮತ್ತು ಬುಡದಲ್ಲಿ ಕಂದು ಬಣ್ಣದ ರಸ ಸೋರುವುದು ಕಂಡುಬರುತ್ತದೆ. ಆಗ ಮರದಿಂದ ೪ ಅಡಿ ಅಂತರದಲ್ಲಿ ೧ ೧/೨ ಅಡಿ ಆಳದ ಕಾಲುವೆ ತೆಗೆದು ೫ಕೆ.ಜಿ. ಬೇವಿನ ಹಿಂಡಿ, ೨೫ಕೆ.ಜಿ. ಹಸಿರೆಲೆಗಳಿಂದ ಕೂಡಿದ ಕಾಂಪೋಸ್ಟ್‌ಗೊಬ್ಬರ ಹಾಕಿ ಮಣ್ಣು ಮುಚ್ಚಿ ನೀರು ಪೂರೈಸಿದರೆ, ೩ ತಿಂಗಳ ನಂತರ ೧/೨ ಭಾಗ ಹರಳು ನಿಂತು ದುಂಡಾಗಿ ಗಾತ್ರವಾಗಿ ಕಂಡುಬರುತ್ತವೆ. ಕ್ರಮೇಣ ಮರ ಸುದಾರಿಸುತ್ತದೆ. ಕಂದು ಬಣ್ಣದ ರಸಸೋರುತ್ತಿದ್ದರೆ ೬ ಅಡಿ ಎತ್ತರದವರೆಗೂ ಸುಣ್ಣದ ಲೇಪನ ಮಾಡಬೇಕು. ೬ ತಿಂಗಳ ನಂತರ ಮೊದಲಿನ ರೂಪಕ್ಕೆ ಬರುತ್ತದೆ. ಈ ರೋಗ ಮರಳಿಗೆ ದೊರೆಯುವ ಲವಣಾಂಶ ಹಾಗೂ ನೀರಿನ ಪ್ರಮಾಣದಲ್ಲಿ ಏರುಪೇರಾದರೂ ಬರಬಹುದು. ಕೆರೆ ಹಿಂಭಾಗದಲ್ಲಿರುವ ತೋಟಗಳಲ್ಲಿ, ಹಾಗೇ ಮಳೆ ಆಶ್ರಯದ ತೋಟಗಳನ್ನು ನೀರಾವರಿಗೆ ಅಳವಡಿಸಿದಾಗ ಈ ರೋಗ ಕಂಡು ಬರುವುದು ಸಹಜ.

ತೆಂಗಿನ ತೋಟದಲ್ಲಿ ಬಾಳೆ ಬೆಳೆ ಬೆಳೆದ ನಂತರ ನೀರು, ಗೊಬ್ಬರ ಪೂರೈಕೆ ಕಡಿಮೆ ಮಾಡುವುದರಿಂದಲೂ ಈ ರೋಗ ಬರಬಹುದಾಗಿದೆ.

ಸಂಗ್ರಹ: ಬಸವರಾಜು,
ಸಂತೇಶಿವರ.

ವಿಶೇಷ ಸೂಚನೆ

- ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನುವಾಣಿಜ್ಯ ದೃಷ್ಟಿಯಿಂದ ಬಳಸಬಯಸುವವರು ಮೊದಲು ಅದನ್ನು ಹಿತ್ತಲಗಿಡದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.
- ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ .
- ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

ಸಂ.

'ಹಿತ್ತಲಗಿಡದ' ಎಲ್ಲಾ ಹಳೇ
ಸಂಚಿಕೆಗಳನ್ನು ರೂ.೨೬೫/–ಪಾವತಿ
ಮಾಡಿ ಪಡೆಯಬಹುದು.
(ಅಂಚೆ ವೆಚ್ಚ ಪ್ರತ್ಯೇಕ)

ದೇಶೀಯ ಜ್ಞಾನ

ಎಣ್ಣೆ-ನೀರು ಕಲೆಯುವುದೇ ?

ಬೇವಿನೆಣ್ಣೆ ಗಿಡಗಳಿಗೆ ಒಳ್ಳೆಯದು. ಭತ್ತ, ಮೆಣಸಿನಕಾಯಿ ಅಷ್ಟೇಕೆ ಮಲ್ಲಿಗೆಗೆ ಬೀಳುವ ಹುಳುಗಳ ಕಾಟ ತಪ್ಪಿಸಲು ಕೂಡಾ ಬೇವಿನೆಣ್ಣೆ ಗಿಡಗಳಿಗೆ ಸಿಂಪರಿಸುವುದು ಸೂಕ್ತವಂತೆ. ಆದರೆ ಎಣ್ಣೆಯನ್ನು ಎಲ್ಲೆಡೆ ಸಮವಾಗಿ ಸಿಂಪರಿಸುವುದು ಹೇಗೆಂಬುದು ರೈತರ ಸಮಸ್ಯೆ. ಔಷಧಿಯನ್ನು ನೀರಿನಲ್ಲಿ ಬೆರೆಸಿ ಸಿಂಪರಿಸುವಂತೆ, ಎಣ್ಣೆಯನ್ನೂ ನೀರಿನಲ್ಲಿ ಕಲೆಸಿ ಸಿಂಪರಿಸಲು ಸಾಧ್ಯವಾದರೆ? ಮರಳು ಮತ್ತು ಸೆಗಣಿ ಎಣ್ಣೆಗೆ ಸೇರಿಸಿದರೆ, ಎಣ್ಣೆ ನೀರಿನಲ್ಲಿ ಸರಿಯಾಗಿ ಬೆರೆಯುತ್ತದೆ ಎನ್ನುತ್ತಾರೆ ತಮಿಳುನಾಡಿನ ರೈತ ರವಿ. ಒಂದು ಲೀಟರ್ ಬೇವಿನೆಣ್ಣೆಗೆ ೩ ಕೆ.ಜಿ. ಮರಳು ಹಾಗೂ ೩ಕೆ.ಜಿ. ಸೆಗಣಿ ಸೇರಿಸಿ ಚೆನ್ನಾಗಿ ಕಲಸಬೇಕು. ಈ ಮಿಶ್ರಣವನ್ನು ತೇವದ ಬಟ್ಟೆಯಿಂದ ಮುಚ್ಚಿ ಸುಮಾರು ೩ ದಿನ ಬಿಡಬೇಕು. ನಾಲ್ಕನೇ ದಿನ ಈ ಮಿಶ್ರಣವನ್ನು ಸುಮಾರು ೧೫೦ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಿಸಲು ಬಳಸಬಹುದು. ಈ ಮಿಶ್ರಣ ಸುಮಾರು ಒಂದು ಎಕರೆ ಬೆಳೆಗೆ ಸಿಂಪರಿಸಲು ಸಾಕಾಗುತ್ತದಂತೆ.

ಮಾಹಿತಿ: ಎಮ್.ಮಣಿ, ಈರೋಡ್ ಜಿಲ್ಲೆ, ತಮಿಳುನಾಡು.

ಸುವರ್ಣಗೆಡ್ಡೆಯಲ್ಲಿ ಮೊಳಕೆ ಬರಿಸುವುದು

ಸುವರ್ಣಗೆಡ್ಡೆಯನ್ನು ನೆಡುವ ಮೊದಲು ಸೆಗಣಿ ಮತ್ತು ಬೂದಿಯ ಮಿಶ್ರಣದಲ್ಲಿ ಅದ್ದಿ ತೆಗೆದು ನಂತರ ನೆಟ್ಟರೆ, ಮೊಳಕೆ ಚೆನ್ನಾಗಿ ಬರುತ್ತದೆ.

-ರೈತರು, ಚಿಕ್ಕಮಗಳೂರು ಜಿಲ್ಲೆ.

ಭೂಮಿಯ ಫಲವತ್ತತೆ ಹೆಚ್ಚಿಸಲು

ಬೇಸಾಯ ಮಾಡುವುದಕ್ಕಿಂತ ಒಂದು ತಿಂಗಳು ಮುಂಚೆ ಬೇವಿನಸೊಪ್ಪು, ಹೊಂಗೆಸೊಪ್ಪು, ತೆಂಗಡಿಕೆ ಸೊಪ್ಪು, ಎಲ್ಲವನ್ನೂ ಒಟ್ಟಾಗಿ ಕೊಟ್ಟಿಗೆ ಗೊಬ್ಬರದೊಂದಿಗೆ ಬೆರಸಿ ಜಮೀನಿಗೆ ಹಾಕಬೇಕು, ನಂತರ ನೇಗಿಲಿನಿಂದ ಉಳುಮೆ ಮಾಡಬೇಕು. ಒಂದು ತಿಂಗಳ ನಂತರ ಇದೇ ಕ್ರಮವನ್ನು ವಿರುದ್ಧ ದಿಕ್ಕಿನಲ್ಲಿ ಪುನರಾವರ್ತಿಸುವುದು. ಹೀಗೆ ಮಾಡುವುದರಿಂದ ಭೂಮಿಯ ಫಲವತ್ತತೆ ಹೆಚ್ಚುವುದಲ್ಲದೆ, ಗಿಡಗಳ ನಿರೋಧಕ ಶಕ್ತಿಯೂ ಹೆಚ್ಚುತ್ತದೆ.

ಸಂಗ್ರಹ: ಬಿ.ಹೆಚ್.ಬಸವರಾಜಪ್ಪ, ತರಿಕೆರೆ.

ಉಳುಮೆಯ ಪರೀಕ್ಷೆ

ಮಾಡಿದ ಉಳುಮೆ ಸಾಕೇ ಸಾಲದೇ? ಬಿತ್ತನೆಗೆ ಮೊದಲು ನೆಲ ಇನ್ನಷ್ಟು ಹದ ಮಾಡಬೇಕಿತ್ತೇ? ಅಸ್ಸಾಂನ ಜನರು ಇದನ್ನು ಪರೀಕ್ಷಿಸುವ ವಿಧಾನವೇ ಕುತೂಹಲಕಾರಿ, ಸುಣ್ಣದೊಂದಿಗೆ, ಎಲೆ ಅಡಿಕೆಯನ್ನು ಚೆನ್ನಾಗಿ ಅಗಿದು ರಸವನ್ನು ಉಳುಮೆ ಮಾಡಿದ ಜಾಗದಲ್ಲಿ ಉಗಿಯುತ್ತಾರೆ. ಉಗಿದ ಜಾಗದಲ್ಲಿ ಮಣ್ಣು ಕಪ್ಪಾದರೆ, ಉಳುಮೆ ಚೆನ್ನಾಗಿ ಆಗಿ, ನೆಲ ಒಳ್ಳೆ ಹದವಾಗಿದೆ ಎಂದು ಅರ್ಥವಂತೆ. ಅದೇ ಉಗಿದ ಜಾಗದಲ್ಲಿ ಮಣ್ಣು ಕಪ್ಪಾಗದೆ, ಕೆಂಪಾಗಿಯೇ ಉಳಿದಿದ್ದರೆ, ಉಳುಮೆ ಮಾಡಿದ್ದು ಸಾಲದು, ಭೂಮಿಯು ಹದ ಸರಿಯಾಗಿಲ್ಲವೆಂದು ಮತ್ತೊಮ್ಮೆ ಉಳುಮೆ ಮಾಡಿಸುತ್ತಾರಂತೆ.

ಭತ್ತದ ಗದ್ದೆಯಲ್ಲಿ ಪಾಚಿ:

ಭತ್ತದ ಗದ್ದೆಯಲ್ಲಿ ಬೆಳೆಯುವ ಪಾಚಿಯನ್ನು ನಾಶಪಡಿಸಲು ಉತ್ತರಪ್ರದೇಶದ ರೈತರು ಉತ್ತರ ಹುಡುಕಿದ್ದು ತೊಗರಿ ಗಿಡದ ಕಡ್ಡಿಗಳಲ್ಲಿ. ತೊಗರಿ ಗಿಡದ ಕಡ್ಡಿಗಳನ್ನು ಕಟ್ಟಿ ರೈತರು ಭತ್ತದ ಗದ್ದೆಗೆ ಹೋಗುವ ನೀರಿನೊಂದಿಗೆ ತೇಲಿ ಬಿಡುತ್ತಾರಂತೆ. ತೊಗರಿ ಗಿಡದ ಕಡ್ಡಿಗಳು ನೀರಿನೊಂದಿಗೆ ತೇಲಿಹೋಗುತ್ತಾ, ಗದ್ದೆಯಲ್ಲಿನ ಪಾಚಿಯನ್ನು ಕತ್ತರಿಸಿ ನಾಶಪಡಿಸುತ್ತವಂತೆ.

ಪಪ್ಪಾಯಿ ಗಿಡದಲ್ಲಿ ಹಣ್ಣು ಬರಿಸುವುದು

ಕೆಲವು ಪಪಾಯಿ ಗಿಡಗಳು ಹಣ್ಣೂ ಬಿಡದೆ ಕೇವಲ ಗಂಡು ಹೂಗಳನ್ನು ಮಾತ್ರ ಬಿಡುವುದುಂಟು. ಇಂತಹ ಮರಗಳಲ್ಲಿ ಹಣ್ಣು ಬಿಡುವಂತೆ ಮಾಡಲು ಅಸ್ಸಾಮಿನ ರೈತರು ಕಂಡುಕೊಂಡ ಉಪಾಯ ಹೀಗಿದೆ:-

-ಪಪ್ಪಾಯಿ ಗಿಡದ ಕಾಂಡದ ಕೆಳಭಾಗದಲ್ಲಿ ಮರದ ತುಂಡುಗಳನ್ನು ಮತ್ತು ಮೊಳೆಗಳನ್ನು ಹೊಡೆಯುತ್ತಾರೆ. ಹೀಗೆ ಮಾಡಿದಾಗ ಪಪ್ಪಾಯಿ ಮರಗಳು ಹಣ್ಣು ಬಿಡಲಾರಂಭಿಸುತ್ತವೆ.

-ಮರದ ಕೆಲವು ಬೇರುಗಳು ಮಣ್ಣಿನಿಂದ ಮೇಲಕ್ಕೆದ್ದಿರುತ್ತವೆ. ಇಂತಹ ಬೇರುಗಳ ತುದಿಗಳನ್ನು ಕತ್ತರಿಸುವುದರಿಂದ ಕೂಡಾ ಮರ ಹೂ ಹಾಗೂ ನಂತರ ಹಣ್ಣು ಬಿಡಲಾರಂಭಿಸುತ್ತದೆ.

-ಮರದ ಮೇಲ್ಭಾಗವನ್ನು ಕತ್ತರಿಸಿ ತೆಗೆಯುತ್ತಾರೆ. ಆಗ ಹೊಸದಾಗಿ ಬರಲಾರಂಭಿಸುವ ಕೊಂಬೆಗಳು ಹೂ, ಹಣ್ಣು

ಕೊಡಲಾರಂಭಿಸುತ್ತವೆ.

–ಪಪ್ಪಾಯಿಯಲ್ಲಿ ಹಣ್ಣಿನ ಇಳುವರಿ ಹೆಚ್ಚಿಸಲು ಗುಜರಾತಿನ ಜನರ ವಿಧಾನವೇ ಇನ್ನೊಂದು. ಒಮ್ಮೆ ನೆಟ್ಟ ಗಿಡವನ್ನು ಕಿತ್ತು ಬೇರೆ ಜಾಗದಲ್ಲಿ ನೆಡುತ್ತಾರೆ. ಹದಿನೈದು ದಿನಗಳ ನಂತರ ಅಲ್ಲಿಂದ ಕಿತ್ತು ಮೊದಲಿದ್ದ ಜಾಗದಲ್ಲೇ ಮತ್ತೆ ನೆಡುತ್ತಾರೆ. ಹೀಗೆ ಮಾಡುವುದರಿಂದ ಗಿಡದ ಬೆಳವಣಿಗೆ ಕಡಿಮೆಯಾಗುತ್ತದೆ. ಆದರೂ, ಇಳುವರಿ ಹೆಚ್ಚುತ್ತದೆ ಎನ್ನುವುದು ಗುಜರಾತಿನ ಪ್ರಜಾಪತಿ ಚಂಗನಭಾಯಿ ಕೋದ್ರಾಭಾಯಿಯವರ ಹೇಳಿಕೆ.

ಮೂಲ: ಹನೀಬೀ ೧೦(೩): ೧೯೯೯

ಕೊಳೆತ ತೆಂಗಿನ ಸುಳಿ ಮತ್ತೆ ತರಿಸುವ ವಿಧಾನ

ತೆಂಗಿನ ಮರಗಳಲ್ಲಿ ಹುಳುವಿನ ಹಾವಳಿಯಿಂದ ಸುಳಿ ಹೋದಲ್ಲಿ ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಹಳದಿ ಬಣ್ಣಕ್ಕೆ ಬಂದು ನಂತರ ಸುಳಿ ಕೊಳೆತು ಕೆಳ ಬೀಳುತ್ತದೆ. ಹಳದಿ ಬಣ್ಣಕ್ಕೆ ಬಂದಾಗಲೇ ಕೈನಿಂದ ಕಿತ್ತು ನೋಡಿ ಬಂದರೆ ಒಳ್ಳೆಯದು. ಬಾರದಿದ್ದಲ್ಲಿ ಒಂದು ಗಟ್ಟಿ ಕಬ್ಬಿಣದ ಸರಳಿನ ಉಪಕರಣದಿಂದ ತಿರುವಿ ಸುಳಿಯ ಸಂಪೂರ್ಣ ಭಾಗ ಹೊರ ತೆಗೆದು ೧ ಲೀಟರ್ ದನದ ಗಂಜಲ, ೧/೪ ಲೀಟರ್ ಬೇವಿನ ಎಣ್ಣೆ, ೧/೨ ಕೆ.ಜಿ. ಗೋದಿ ಹಿಟ್ಟನ್ನು ಸುರಿಯಿರಿ. ಇದರಿಂದ ಕೊಳೆತ ಸುಳಿಯ ಭಾಗಕ್ಕೆ ಔಷಧಿ ಲೇಪನವಾಗಿ ಮತ್ತು ೧ ೧/೨ ತಿಂಗಳಲ್ಲಿ ಸುಳಿ ಬರುತ್ತದೆ. ಮಳೆಗಾಲದಲ್ಲಿ ಈ ಕ್ರಮ ಅನುಸರಿಸಿದ್ದೇ ಆದರೆ ಸುಳಿ ಭಾಗವನ್ನು ನೀರು ಬೀಳದ ರೀತಿ ಮುಚ್ಚ ಬೇಕಾಗುತ್ತದೆ.

ಸಂಗ್ರಹ: ಬಸವರಾಜ, ಸಂತೇಶಿವರ.

ಕಾಯರ್ ಪಿತ್ ಗೊಬ್ಬರ ಮಾಡುವ ವಿಧಾನ

ತೆಂಗಿನ ಕಾರ್ಖಾನೆಯಿಂದ ಬಿಸಾಡಿದ ಕಾಯರ್ ಪಿತ್ತನ್ನು ಪ್ರತಿದಿನ ೩ ಅಂಗುಲ ದನಗಳ ಕೊಟ್ಟಿಗೆಯಲ್ಲಿ ಹರಡಿ. ಈ ರೀತಿ ಮಾಡುವುದರಿಂದ ದನಗಳು ಸುಖವಾಗಿ ಮಲಗುತ್ತವೆ. ಅವುಗಳಿಂದ ವಿಸರ್ಜಿಸಿದ ಗಂಜಲ, ಸಗಣಿ, ಕಾಯರ್ ಪಿತ್‌ಗೆ ಸೇರುತ್ತದೆ. ದನಗಳ ಮೈ ಕೊಳಕಾಗದಂತೆ ಕಾಪಾಡುತ್ತದೆ. ಒಂದು ವಾರದಲ್ಲಿ ದನಗಳ ಮೈನಲ್ಲಿರುವ ಉಣ್ಣೆಗಳು ಇಲ್ಲದಂತಾಗುತ್ತವೆ. (ರಾತ್ರಿ ವೇಳೆಯಲ್ಲಿ ದನಗಳ ಮೈನಿಂದ ಕೆಳಗಿಳಿದ ಉಣ್ಣೆಗಳು ಮತ್ತೆ ಮೈ ಮೇಲೆ ಬರುವುದಿಲ್ಲ ಕಾಯರ್ ಪಿತ್‌ನಲ್ಲಿ ಸೇರುತ್ತವೆ). ಈ ರೀತಿ ಹರಡಿದ ಕಾಯರ್ ಪಿತ್‌ನ್ನು ಪ್ರತಿದಿನ ಬೆಳಿಗ್ಗೆ ಸಗಣಿ ಸಮೇತ ಕಾಂಪೋಸ್ಟ್‌ಗುಂಡಿಗೆ ಹಾಕಿದರೆ, ೯೦ದಿನಗಳಲ್ಲಿ ಗೊಬ್ಬರ ಸಿದ್ಧವಾಗಿತ್ತದೆ. ದನದ ಕೊಟ್ಟಿಗೆ ಶುಭ್ರವಾಗಿರುತ್ತದೆ. ಕಾಯರ್ ಪಿತ್, ಸಗಣಿ ಗಂಜಲ ಮಿಶ್ರವಾದೊಡನೆ ೭೦.೩% ಇಂಗಾಲ ಸಗಣಿಯಲ್ಲಿರುವ ಸಾರಜನಕದೊಡನೆ ಸೇರುತ್ತದೆ. ಶಾಖ ಉತ್ಪತ್ತಿಯಾಗಿ ಕೊಳೆಯಲು ಪ್ರಾರಂಬಿಸುತ್ತದೆ. ಈ ಗೊಬ್ಬರದಲ್ಲಿ ಕಳೆ ಬೀಜಗಳು ನಾಶವಾಗುತ್ತವೆ. ಹೆಚ್ಚಿನ ಪೋಷಕಾಂಶಗಳು ಬೆಳೆಗೆ ದೊರಕುತ್ತವೆ. ನೀರಿನ ಅಂಶವನ್ನು ಶೇಖರಿಸಿಟ್ಟುಕೊಂಡು ಬೆಳೆಗೆ ಪೂರೈಸುತ್ತದೆ. ಒಂದು ಜಾನುವಾರುವಿನಿಂದ ಒಂದು ಎಕರೆಗೆ ಸಾಕಾಗುವಷ್ಟು ಗೊಬ್ಬರವನ್ನು ತಯಾರಿಸಬಹುದು. ಈ ಗೊಬ್ಬರವನ್ನು ಎರೆ ಹುಳುಗಳು ಹೆಚ್ಚಾಗಿ ತಿನ್ನುತ್ತವೆ. ಹೇರಳವಾಗಿ ಸಂತತಿ ಹೆಚ್ಚಿ ಗೊಬ್ಬರ ತಯಾರಿಕೆಯ ಕಾರ್ಖಾನೆ ಪ್ರತಿ ಗಿಡಗಳ ಬುಡದಲ್ಲಿ ಪ್ರಾರಂಭವಾಗಿ ಹೆಚ್ಚಿನ ಇಳುವರಿಯನ್ನು ಪಡೆಯಬಹುದು.

ಬಸವರಾಜ, ಸಂತೇಶಿವರ.

ಜನ ಶಕ್ತಿ

ಕೇರಳದ ಕಣ್ಣೂರಿನಿಂದ ೬೦ ಕಿ.ಮಿ. ದೂರದ ಕುಗ್ರಾಮ ಪಾತಂಪಾರ. ಅಲ್ಲಿ ೧೯೯೭ರವರೆಗೂ ವಿದ್ಯುತ್ ಹರಿಯುವುದೂ ಅಸಾಧ್ಯವಾಗಿತ್ತು. ಹಾಗಾಗಿ ರಾತ್ರಿ ಕಗ್ಗತ್ತಲು. ಸಮುದ್ರ ಮಟ್ಟದಿಂದ ೨೦೦೦ ಎತ್ತರದ ಈ ಕುಗ್ರಾಮದ ಜನರ ಇಚ್ಛಾಶಕ್ತಿಗೆ ಏನೂ ಕೊರತೆಯಿರಲಿಲ್ಲ. ೨.೫ಲಕ್ಷ ಲೀಟರ್ ಧಾರಣಾ ಸಾಮರ್ಥ್ಯದ ಒಂದು ಗುಂಡಿ ತೋಡಿ, ಮೇಲಿಂದ ೫ ಇಂಚು ಪ್ಲಾಸ್ಟಿಕ್ ಕೊಳವೆಯ ಮೂಲಕ ನೀರು ಹರಿಸಿ, ಒಟ್ಟು ನಾಲ್ಕು ಕಿಲೋವ್ಯಾಟ್ ವಿದ್ಯುತ್ ತಯಾರಿಸುವ ಜನರೇಟರ್ ನಿರ್ಮಿಸಿ ಊರಿನ ಎಲ್ಲಾ ೭೪ ಮನೆಗಳಿಗೆ ಬೆಳಕು ಚೆಲ್ಲುವಂತೆ ಮಾಡಿದ ಆ ಊರಿನ ಜನರ ಸಾಹಸಕ್ಕೆ ಸರಿಸಮಾನಾದ ಉದಾಹರಣೆ ಅಪರೂಪ.

ಜೊತೆಗೆ ವಿದ್ಯುತ್ ಹಂಚಿಕೆಯ ವಿಚಾರದಲ್ಲಿ ಬಳಸಿದ ಸಹಕಾರಿ ತತ್ವವೂ ಕೂಡ ಅಷ್ಟೇ ಶ್ಲಾಘನೀಯ. ಹಗಲಿನಲ್ಲಿ ಯಾರೂ ವಿದ್ಯುತ್ ಬಳಸುವಂತಿಲ್ಲ, ಖರ್ಚನ್ನು ಬಳಕೆದಾರರೆಲ್ಲರೂ ಸಮಾನಾಗಿ ಭರಿಸುವುದು, ಅನಗತ್ಯ ವಿದ್ಯುತ್ ಉಪಕರಣ ಬಳಸುವಂತಿಲ್ಲ ಇತ್ಯಾದಿ ಕಟ್ಟುನಿಟ್ಟಿನ ಕ್ರಮಗಳ ನಡುವೆಯೂ ಈ ಪ್ರಯೋಗ, ೨ ವರ್ಷ ದಾಟಿದೆ ಎಂದ ಮೇಲೆ ಇದು ಇಲ್ಲಿನ ಸಹಕಾರಿ ಮನೋಭಾವನೆಗೆ ಕನ್ನಡಿ ಹಿಡಿದಂತಿದೆ.

ಮೂಲ: ಪ್ರಜಾವಾಣಿ, ೨೪-೧೧-೯೯

ಭತ್ತದ ಹುಲ್ಲಿನ ರಾಶಿಯ ನಡುವೆ ಸೊಪ್ಪು

ಕೊಯ್ದು ತಂದ ಭತ್ತ ಸಂಗ್ರಹಣೆ ಮಾಡುವಾಗ ಭತ್ತದ ಗಿಡದಿಂದ ಭತ್ತ ತೆಗೆಯುವ ಮೊದಲು ಹುಲ್ಲು-ಕಾಳು ಒಟ್ಟಾಗಿ ಅಂದರೆ ಇಡೀ ಗಿಡವನ್ನೇ ರಾಶಿಹಾಕಿ ಪೇರಿಸಿಡುವುದು ವಾಡಿಕೆ. ಹೀಗೆ ರಾಶಿ ಹಾಕುವಾಗ ರಾಶಿಯ ಮಧ್ಯೆ ಬೇವಿನ ಸೊಪ್ಪು, ಲಕ್ಕಿ ಸೊಪ್ಪು , ಎಳೆಯ ಮಾವಿನ ಎಲೆಗಳು ಇವನ್ನು ಹರಡುವುದರಿಂದ ಹುಳುಗಳ ಕಾಟವಿಲ್ಲದೆ, ಹುಲ್ಲು, ಕಾಳು ಎರಡೂ ಸುರಕ್ಷಿತವಾಗಿರುತ್ತವೆ ಎನ್ನುವುದು ಅಸ್ಸಾಂನ ಜನರ ಅನುಭವ.

ಭತ್ತಕ್ಕೆ ಹೊಗೆಸೊಪ್ಪಿನ ರಕ್ಷೆ

ಭತ್ತ ಸಂಗ್ರಹಣೆ ಮಾಡುವಾಗ, ಕಣಜ ಮಾಡುವ ಜಾಗದಲ್ಲಿ ಗೋಣಿಚೀಲ ಹಾಸುತ್ತಾರಂತೆ ಅಸ್ಸಾಂನ ಜನ. ಅದರಲ್ಲೇನು ವಿಶೇಷ ಎನ್ನಬೇಡಿ. ಇದು ಬರಿಯ ಗೋಣಿಚೀಲಗಳಲ್ಲ. ಹೊಗೆಸೊಪ್ಪಿನ ರಸತೆಗೆದು ನೀರಿನಲ್ಲಿ ಬೆರೆಸಿದ ದ್ರಾವಣದಲ್ಲಿ ಗೋಣಿಚೀಲಗಳನ್ನು ಹಾಕಿ ಕುದಿಸುತ್ತಾರಂತೆ. ಹೀಗೆ ಚೆನ್ನಾಗಿ ಕುದಿದ ನಂತರ ಗೋಣಿಚೀಲಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸುತ್ತಾರೆ. ಈ ಗೋಣಿಚೀಲಗಳನ್ನು ನೆಲದಲ್ಲಿ ಹಾಸಿ ಅದರ ಮೇಲೆ ಭತ್ತ ಹರಡುತ್ತಾರೆ. ಈ ರೀತಿ ಒಂದು ಪದರ ಭತ್ತದ ರಾಶಿ ಹರಡಿದ ಮೇಲೆ ಪುನಃ ಅದರ ಮೇಲೆ ಗೋಣಿಚೀಲ ಹಾಕುತ್ತಾರಂತೆ. ಹೀಗೆ ಪದರಪದರವಾಗಿ ಭತ್ತದ ಮೇಲೆ ವಿಶೇಷವಾಗಿ ಸಿದ್ಧಗೊಳಿಸಿದ ಗೋಣಿಚೀಲವನ್ನು ಹರಡಿ ಹುಳುಗಳ ಕಾಟವಿಲ್ಲದೆ ಸುರಕ್ಷಿತವಾಗಿ ಭತ್ತ ಸಂಗ್ರಹಿಸಬಹುದಂತೆ.

ಬಿತ್ತನೆ ಬೀಜದ ಭತ್ತ-ಬೆತ್ತದ ಬುಟ್ಟಿಯಲ್ಲಿ

ಬೀಜಕ್ಕೆಂದು ಆಯ್ದು ಸಂಗ್ರಹಿಸಿದ ಕಾಳುಗಳನ್ನು ಸಂಗ್ರಹಿಸುವ ವಿಧಾನವೇ ಬೇರೆ. ಬೆತ್ತದ ಬುಟ್ಟಿ (ಅಸ್ಸಾಂನ ಜನರು ಟೂಮ್ ಎಂದು ಕರೆಯುವ ಒಂದು ರೀತಿಯ ಬುಟ್ಟಿ) ಯೊಳಗೆ ಭತ್ತದ ಹುಲ್ಲನ್ನು ಸಮನಾಗಿ ಹರಡಿ, ಅದರ ಮೇಲೆ ಬೀಜಕ್ಕೆಂದು ಸಂಗ್ರಹಿಸಿದ ಭತ್ತದ ಕಾಳುಗಳನ್ನು ಹರಡುತ್ತಾರಂತೆ. ಅನಂತರ ಬೀಜದ ಕಾಳುಗಳ ಮೇಲೆ ಪುನಃ ಭತ್ತದ ಹುಲ್ಲನ್ನು ಸಮನಾಗಿ ಹರಡಿ ಬಿಗಿಯಾಗಿ ಕಟ್ಟುತ್ತಾರೆ. ಹೀಗೆ ಸಿದ್ಧಗೊಳಿಸಿದ ಬುಟ್ಟಿಯನ್ನು ಕೀಟ, ಇಲಿ-ಹೆಗ್ಗಣಗಳ ಬಾಯಿಗೆ ಸಿಗದಂತೆ ಎಚ್ಚರಿಕೆಯಿಂದ ಮನೆಯ ಮಾಡಿನಲ್ಲಿ ನೇತು ಹಾಕುತ್ತಾರೆ.

ಸಂಗ್ರಹ: ಸಾಜಿಬ್ ಬರುವಾ

ಮೂಲ: ಹನೀಬೀ ೧೦(೩):೧೯೯೯

ಕಾಳು ಸಂಗ್ರಹಣೆ

ಉತ್ತರ ಪ್ರದೇಶದ ಕಾನ್‌ಪುರದ ರೈತರು ಉದ್ದು, ಕಡಲೆ ಈ ರೀತಿಯ ಕಾಳುಗಳನ್ನು ಸಂಗ್ರಹಿಸುವಾಗ ಸಾಸಿವೆ ಎಣ್ಣೆಯಿಂದ ಚೆನ್ನಾಗಿ ಸವರಿ, ಬೂದಿಯೊಂದಿಗೆ ಬೆರೆಸಿ ಸಂಗ್ರಹಿಸುತ್ತಾರಂತೆ. ಹೀಗೆ ಮಾಡುವುದರಿಂದ ಕೀಟದ ಕಾಟ ಕಡಿಮೆಯಂತೆ.

ಸಂಗ್ರಹ: ಎಸ್.ಹೆಚ್.ಖಾನ್, ಕಾನ್‌ಪುರ

ಮೂಲ: ಹನೀಬೀ ೧೦(೩):೧೯೯೯

ಗುಬಸಿ ಮುಳ್ಳಿನಿಂದ ಮೂಷಿಕಗಳಿಗೆ ತಡೆ

ಗುಬಸಿ ಮುಳ್ಳು (*Barleria buxifolia*) ಅಥವಾ ಗಂಡು ಕೊಟ್ಟೇ ಮುಳ್ಳಿನ ಗಿಡವನ್ನು ಕನಕಪುರದ ಸುತ್ತಮುತ್ತಲಿನ ರೈತರ ಹೊಲದಲ್ಲಿ ಅಥವಾ ಧಾನ್ಯ ಶೇಖರಿಸುವ ಸ್ಥಳದಲ್ಲಿ ಇಲಿಗಳ ನಿಯಂತ್ರಣಕ್ಕೆ ಬಳಸುತ್ತಾರೆ. ಟೊಂಕದೆತ್ತರದ ಈ ಗಿಡದ ಮೈತುಂಬ ಸಣ್ಣ ಸಣ್ಣ ಮುಳ್ಳುಗಳಿದ್ದು ಧಾನ್ಯ ತಿನ್ನಲು ಬರುವ ಮೂಷಿಕಗಳ ಮೂತಿಗೆ ಚುಚ್ಚಿ ಅವುಗಳನ್ನು ಬರದಂತೆ ಮಾಡುತ್ತವೆ. ಧಾನ್ಯ ಸಂಗ್ರಹಿಸಿಡುವ ಸ್ಥಳಗಳಲ್ಲಿ ಅಥವಾ ಇಲಿಗಳ ಬಿಲಗಳ ಬಾಯಿಯಲ್ಲಿಟ್ಟರಂತೂ ಇದರ ಪರಿಣಾಮ ಅದ್ಭುತ.

ಸಂಗ್ರಹ: ಜಿ. ಕೃಷ್ಣ ಪ್ರಸಾದ,

'ಹಿತ್ತಲಗಿಡ'ದ ಕುಟುಂಬ

Honey bee	ಇಂಗ್ಲೀಷ್
Nam Vazhi Velanmai	ತಮಿಳು
Lokasarvani	ಗುಜರಾತಿ
Dzongkha Honey Bee	ಭೂತಾನಿ
Thenetiga	ತೆಲುಗು
Sujh Bujh	ಹಿಂದಿ
Khoj Bhal	ಪಂಜಾಬಿ


ಗೋಬರ್‌ಗ್ಯಾಸ್‌ನ ಸುಧಾರಿತ ಮಾದರಿ

-ಸುದರ್ಶನ, ಪುತ್ತೂರು.


ಪರ್ಯಾಯ ಶಕ್ತಿಮೂಲಗಳ ಯೋಜನೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಅತಿಯಾಗಿ ಬಳಕೆಯಲ್ಲಿರುವ ಶಕ್ತಿಮೂಲವೆಂದರೆ 'ಗೋಬರ್ ಗ್ಯಾಸ್' ಅಥವಾ ಗೋಬರ್ (ಅನಿಲ) ಯಂತ್ರ. ಈ ಗೋಬರ್ ಗ್ಯಾಸ್ ಯಂತ್ರದ ರಚನೆಯಲ್ಲಿನ ಕೆಲವು ದೋಷಗಳಿಂದಾಗಿ ಕೆಲವೊಮ್ಮೆ ಗೋಬಾರ್ ಅನಿಲಯಂತ್ರ ಕೆಟ್ಟು ಕೂರುವುದುಂಟು, ಹಲವು ಬಾರಿ ಹಳ್ಳಿ ಮೂಲೆಗಳಲ್ಲಿರುವ ಈ ಗೋಬರ್ ಗ್ಯಾಸನ್ನು ರಿಪೇರಿ ಮಾಡಲಾಗದೆ ಮೂಲೆ ಗುಂಪಾಗುವುದೂ ಉಂಟು. ಈ ರೀತಿಯ ಒಂದು ದೋಷವನ್ನು ರಿಪೇರಿ ಮಾಡಿ ಸುಧಾರಿಸುವ ವಿಧಾನವನ್ನು ಇಲ್ಲಿ ಸೂಚಿಸಲಾಗಿದೆ.

ಕೆಳಗೆಡೆಯ 'ಅ' ಚಿತ್ರದಲ್ಲಿರುವುದು ಸಾಮಾನ್ಯವಾಗಿ ರಚಿಸುವ ಗೋಬರ್ ಅನಿಲ ಯಂತ್ರದ ಮಾದರಿ. ಅನಿಲ ಅಥವಾ ಗ್ಯಾಸ್ ತುಂಬುವ ಡ್ರಂನ್ನು ಮಾತ್ರ ಚಿತ್ರದಲ್ಲಿ ತೋರಿಸಲಾಗಿದೆ. ಸೆಗಣಿ ಕೊಳೆಯುವಿಕೆಯಿಂದ ಉತ್ಪತ್ತಿಯಾಗುವ ಅನಿಲ ಈ ಡ್ರಂನಲ್ಲಿ ಶೇಖರ ಹೊಂದುತ್ತದೆ. ಅನಿಲ ತುಂಬಿದಾಗ ಡ್ರಂ ಮೇಲೇರುತ್ತದೆ ಹಾಗೂ ಅನಿಲ ಕಡಿಮೆಯಾದಂತೆ ಡ್ರಂ ಕೆಳಗಿಳಿಯುತ್ತದೆ. ಈ ರೀತಿ 'ಡ್ರಂ'ನ ಮೇಲೆ ಕೆಳಗೆ ಹೋಗುವ ಚಲನೆಯನ್ನು ಗೋಬರ್ ಅನಿಲಯಂತ್ರದ ಮಧ್ಯಭಾಗದಲ್ಲಿರುವ ಕಬ್ಬಿಣದ ಕೊಳವೆ ನಿಯಂತ್ರಿಸುತ್ತದೆ. ಈ ಕಬ್ಬಿಣದ ಕೊಳವೆ ಸದಾ ಸೆಗಣಿಯ ಸಂಪರ್ಕದಲ್ಲಿರುವುದರಿಂದ ತುಕ್ಕು ಹಿಡಿಯುವ ಸಂಭವ ಜಾಸ್ತಿ. ಈ ರೀತಿ ತುಕ್ಕು ಹಿಡಿದು ಮುರಿದು ಬೀಳುವ ಕೊಳವೆಯನ್ನು ರಿಪೇರಿ ಮಾಡಿಸುವುದು ಕಷ್ಟ. ಈ ರೀತಿ ತುಕ್ಕು ಹಿಡಿಯುವ ತೊಂದರೆ ತಪ್ಪಿಸಲು ಚಿತ್ರ 'ಆ' ದಲ್ಲಿ ತೋರಿಸಿರುವಂತೆ ಸರಳ ಉಪಾಯ ಮಾಡಬಹುದು. 'ಅನಿಲ ಡ್ರಂ'ನ ಚಲನೆಯನ್ನು ನಿರ್ದೇಶಿಸುವ ಕಬ್ಬಿಣದ ಕೊಳವೆಯ ಬಳಕೆಯನ್ನೇ ಕೈಬಿಡುವ ಉಪಾಯ ಇದು. ಕಬ್ಬಿಣ ಕೊಳವೆಯ ಬದಲು ಅನಿಲ ಯಂತ್ರದ ತಳಭಾಗದ ಭಾರವನ್ನು ಹೆಚ್ಚಿಸಬೇಕು. ಈ ರೀತಿ ತಳಭಾಗದ ಭಾರ ಹೆಚ್ಚುವುದರಿಂದ ಅನಿಲಯಂತ್ರ ನೇರವಾಗಿ ತೇಲಾಡುತ್ತದೆ. ತೆಲೆಕೆಳಗಾಗುವ ಅಥವಾ ಓರೆಯಾಗುವ ಸಾಧ್ಯತೆಗಳಿಲ್ಲ. ಒಟ್ಟಾರೆ ಕಬ್ಬಿಣದ ಕೊಳವೆ ಮಾಡುವ ಅನಿಲ ಡ್ರಂನ ಚಲನೆಯ ನಿರ್ದೇಶನದ ಕಾರ್ಯವನ್ನು ತಳದ ಭಾರ ನಡೆಸುತ್ತದೆ.

ಈ ರೀತಿಯ ಸರಳ ಮಾರ್ಪಾಟು ಅನಿಲ ಯಂತ್ರದ ದಕ್ಷತೆ ಹೆಚ್ಚಿಸುವುದಲ್ಲದೆ ಖರ್ಚು ಕೂಡಾ ಕಡಿಮೆ ಮಾಡುತ್ತದೆ. ಜೊತೆಗೆ ಅನಿಲಯಂತ್ರದ ರಚನೆ ಕೂಡಾ ಸರಳ ಸಾಧ್ಯವಾಗುತ್ತದೆ.



ಅ. ಸಾಮಾನ್ಯ ಗೋಬರ್ ಗ್ಯಾಸ್ ಯಂತ್ರ



ಆ. ಸುಧಾರಿಸಿದ ಯಂತ್ರ

ಕತ್ತೆಗಳಿಂದ ಕೃಷಿ

ರಾಯಚೂರಿನ ಕೃಷಿ ವಿಜ್ಞಾನಿ ಡಾ|| ಆರ್.ಎಸ್.ಹಳ್ಳಿಕೇರಿಯವರು ಅಚ್ಚ ಬಿಳಿ ಬಣ್ಣದ ಕತ್ತೆ ತಳಿಗಳನ್ನು ಆಯ್ದು ಅಭಿವೃದ್ಧಿಪಡಿಸಿ ಕೃಷಿ ಉಳುಮೆಗೆ, ಗಾಡಿ ಎಳೆಯಲು ಸಾಧ್ಯವೆಂದು ತೋರಿಸಿಕೊಟ್ಟಿರುವರು. ಈ ರೀತಿಯ ಒಂದು ಜೊತೆ ಕತ್ತೆಗಳು ಕಳೆದ ಬಾರಿಯ ಬೆಂಗಳೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾನಿಲಯಗಳ ಕೃಷಿಮೇಳದ ಆಕರ್ಷಕ ಬಿಂದುಗಳಾಗಿದ್ದವು.

ಮಕ್ಕಳು ಅರಸಿತಂದ ಪಶುಚಿಕಿತ್ಸಾ ಕ್ರಮಗಳು

ಸೆಲೆ

೧) ಇದಕ್ಕೆ ಬಂಗಿಸೊಪ್ಪು ಮತ್ತು ನಾಟಿ ಕೋಳಿ ಮೊಟ್ಟೆಯನ್ನು ಬಳಸುತ್ತಾರೆ. ಬಂಗಿ ಸೊಪ್ಪನ್ನು ಒಣಗಿಸಿ ಅರೆದು ಮೊಟ್ಟೆಯೊಂದಿಗೆ ಬೆರೆಸಿ ಕುಡಿಸಬೇಕು.

ಸಂಗ್ರಹ: ಟಿ.ಎಲ್.ಸುನೀತ, ೮ನೇ ತರಗತಿ ಗೊಲ್ಲಹಳ್ಳಿ.
ಮಾಹಿತಿ: ನಿಂಗೆಗೌಡ, ತಗಡೇ ಗೌಡನದೊಡ್ಡಿ.

೨) ಹಿಂಗು, ಬೆಳ್ಳುಳ್ಳಿ, ಮೆಣಸನ್ನು ಮಜ್ಜಿಗೆಯಲ್ಲಿ ಅರೆದುಕೊಳ್ಳಬೇಕು. ಇದನ್ನು ೩-೪ ದಿನಗಳ ಕಾಲ ಕುಡಿಸಿದಾಗ ರೋಗ ನಿಯಂತ್ರಣಕ್ಕೆ ಬರುತ್ತದೆ.

ಸಂಗ್ರಹ: ಆಶಾರಾಣಿ.ಎನ್.ಆರ್, ಹುಣಸನಹಳ್ಳಿ.
ಮಾಹಿತಿ: ನಾಗೋಜಿರಾವ್, ನೇರಲ ಹಟ್ಟಿ.

೩) ಬೇವಿನ ಸೊಪ್ಪು, ಹುಣಸೆ ಹಣ್ಣು, ಮೆಣಸಿನ ಕಾಯಿ, ವಿಳ್ಳೇದೆಲೆ, ಮೆಣಸು, ಬೆಲ್ಲ, ನಾಟಿ ಕೋಳಿ ಮೊಟ್ಟೆ, ಹುಣಸೆಯ ಚೆಕ್ಕೆ ಇವುಗಳನ್ನು ಜಜ್ಜಿ ಹಾಲಿನಲ್ಲಿ ಕಲಸಿ ಹಸುಗಳಿಗೆ ಕೊಡಬೇಕು.

ಸಂಗ್ರಹ: ಸದಾಶಿವಯ್ಯ, ೮ನೇ ತರಗತಿ, G.H.S ಶಾಲೆ, ದೊಡ್ಡಮರಳವಾಡಿ.

೪) ಗುಪ್ಪಟ್ಟೆ ಸೊಪ್ಪು (*Physalis minima*) ಒಂದು ಹಿಡಿ, ಬೇವಿನ ಸೊಪ್ಪು ಒಂದು ಹಿಡಿ, ಉಗುನಿ ಕುಡಿ ಒಂದು ಹಿಡಿ, ಸಾಸಿವೆ ಮತ್ತು ಮೆಣಸು ೧೦ ಗ್ರಾಂನಷ್ಟು ಇವನ್ನೆಲ್ಲ ಕುಟ್ಟಿ ಹಾಲಿನ ಜೊತೆಯಲ್ಲಿ ಕುಡಿಸಬೇಕು.

ಸಂಗ್ರಹ: ಸೋಮಶೇಖರ್ ಕೆ.ಎಸ್, G.H.S ಶಾಲೆ, ದೊಡ್ಡಮರಳವಾಡಿ.
ಮಾಹಿತಿ: ಶಂಕರೇಗೌಡ, ದೊಡ್ಡಮರಳವಾಡಿ.

೫) ಈ ರೋಗಕ್ಕೆ ಮೊದಲು ಕೋಳಿ ಮೊಟ್ಟೆಯನ್ನು ಒಡೆದು ಕುಡಿಸಬೇಕು. ನಂತರ ಲವಂಗ, ವಿಳ್ಳೇದೆಲೆ, ಬೆಲ್ಲ, ಮೆಣಸು, ಹಸಿಶುಂಠಿ ಇವುಗಳನ್ನು ಜಜ್ಜಿ ತಿನ್ನಿಸಬೇಕು.

ಸಂಗ್ರಹ: ವನಜಾಕ್ಷಿ, ಕನಕಪುರ.

೬)ಮೊದಲಿಗೆ ಕೋಳಿ ಮೊಟ್ಟೆಯನ್ನು ತಿನ್ನಿಸಬೇಕು. ನಂತರ ಈರುಳ್ಳಿ, ಬೆಲ್ಲ, ಮೆಣಸು, ವಿಳ್ಳೇದೆಲೆ, ಇವುಗಳನ್ನೆಲ್ಲಾ ಚೆನ್ನಾಗಿ ಜಜ್ಜಿ ಉಂಡೆ ಕಟ್ಟಿ ತಿನ್ನಿಸಬೇಕು. ಇದನ್ನೆಲ್ಲ ತಿಂದ ಹಸು ಲಘುವಾಗಿ ಮೆಲಕು ಹಾಕುತ್ತದೆ. ಆನಂತರ ಕಾದಾರಿದ ನೀರನ್ನು ಕುಡಿಸಬೇಕು.

ಸಂಗ್ರಹ: ದೀಪು.ಕೆ, ದೊಡ್ಡ ಆಲಹಳ್ಳಿ, ಕನಕಪುರ.

೭) ಮೆಣಸಿನಕಾಯಿ, ಈರುಳ್ಳಿ, ಬೇವಿನಸೊಪ್ಪು ಇವುಗಳನ್ನು ಜಜ್ಜಿ ಹಸುಗಳಿಗೆ ತಿನ್ನಿಸಬೇಕು.

ಸಂಗ್ರಹ: ಆಶಾ.
ಮಾಹಿತಿ: ಶಿವಮಾದೇಗೌಡ, ದೊಡ್ಡ ಆಲಹಳ್ಳಿ.

೮) ವಿಳ್ಳೇದೆಲೆ, ಮೆಣಸು, ಲವಂಗ, ತುಳಸಿಸೊಪ್ಪು, ಆನೆ ಲದ್ದಿಯನ್ನು ಜಜ್ಜಿ ಹಸುಗಳಿಗೆ ತಿನ್ನಿಸಬೇಕು.

ಸಂಗ್ರಹ: ವಿದ್ಯಾರಾಣಿ, ೯ನೇ ತರಗತಿ, ಕನಕಪುರ

೯) ಚಿತ್ರಮೂಲದ ಬೇರು, ಆಡು ಮುಟ್ಟದ ಬೇರು (*Tylophora asthamatica*), ದತ್ತೂರಿ ಬೇರು (*Datura fastuosa*), ಕಾಡು ಮೆಣಸಿನ ಸೊಪ್ಪು, ಹಿಸಗಲಿ ಸೊಪ್ಪು, ಕತ್ತರಿ ಚಕ್ಕೆ, ಹೊಂಗೆ ಚಕ್ಕೆ, ತಾವಸದ ಚಕ್ಕೆ, ನುಗ್ಗೆ ಚಕ್ಕೆ ಇವುಗಳನ್ನೆಲ್ಲ ಕುಟ್ಟಿ ಪುಡಿ ಮಾಡಿ ಆಡಿನ ಮೂತ್ರದಲ್ಲಿ ಕಲೆಸಿ, ೩ ದಿನಗಳ ಕಾಲ ಕೊಡಬೇಕು.

ಸಂಗ್ರಹ: ಕೃಷ್ಣ ವೈ.ಎಂ.
ಮಾಹಿತಿ: ಹೊನ್ನೇಗೌಡ, ದೊಡ್ಡಮರಳವಾಡಿ.

ಹೊಟ್ಟೆ ಊತದ ಸೆಲೆ

ಕತ್ತೆ ಕಿವಿಯ ಸೊಪ್ಪನ್ನು ಕೆಂದ ಎಳನೀರಿನಲ್ಲಿ ಅರೆದು ಬೆಲ್ಲವನ್ನು ಸೇರಿಸಿ ೧/೪ ಲೀಟರಿನಷ್ಟು ದಿನಕ್ಕೆ ಮೂರು ಬಾರಿಯಂತೆ ಕೊಡಬೇಕು. ರಾಗಿ ಹಿಟ್ಟಿನ ಗಂಜಿ, ಉಪ್ಪು ಹಾಕಿದ ಬೆಚ್ಚಗಿನ ನೀರನ್ನು ಸ್ವಲ್ಪ ಸ್ವಲ್ಪ ಕುಡಿಸಬೇಕು.

ಸಂಗ್ರಹ: ನವೀನ್ ಕುಮಾರ್.ಜೆ.ಕನಕಪುರ

ಕಾಲು ಬಾಯಿ ಜ್ವರ

ಹಂದಿಯ ಮಾಂಸವನ್ನು ಬೇಯಿಸುವಾಗ ಬರುವ ತುಪ್ಪವನ್ನು ಪಚ್ಚ ಬಾಳೆಹಣ್ಣಿಗೆ ಸವರಿ ತಿನ್ನಿಸುವುದು, ಕೋಳಿಮೊಟ್ಟೆಯನ್ನು ಉಪ್ಪು ಹಾಕಿದ ರಾಗಿ ಹಿಟ್ಟಿನ ಅಂಬಲಿಗೆ ಬೆರೆಸಿ ಆಹಾರವಾಗಿ ನೀಡಬೇಕು.

ಸಂಗ್ರಹ: ನವೀನ್ ಕುಮಾರ್ ಜೆ,ಕನಕಪುರ

ಬತ್ತದ ಹೊಟ್ಟು ಸುಟ್ಟು ಬಂದ ಬೂದಿಯ ಮರು ಬಳಕೆ

ಬತ್ತದ ಬೆಳವಣಿಗೆಗೆ ಸಾರಜನಕ, ರಂಜಕ, ಪೊಟ್ಯಾಷ ಮತ್ತಿತರ ಪೋಷಕಾಂಶಗಳ ಅಗತ್ಯ ಇದೆ ಎಂದು ಎಲ್ಲರಿಗೂ ತಿಳಿದಿದ್ದೇ, ಆದರೆ ಸಿಲಿಕಾನಿನ ಮಹತ್ವದ ಬಗ್ಗೆ ಗಮನ ಇದುವರೆಗೆ ಯಾರೂ ಹರಿಸಿರದಿರುವುದು ಮಾತ್ರವಲ್ಲ ಅದರ ಪೂರೈಕೆ ಬತ್ತ ಬೆಳೆಯುವ ರೈತರ ಕಾಲಡಿಯಲ್ಲೇ ಇರುವುದೂ ಹಲವರಿಗೆ ತಿಳಿದಿಲ್ಲ.

ಆದರೆ ಬೇಸಾಯ ಶಾಸ್ತ್ರದ ಪ್ರಕಾರ ಸಿಲಿಕಾನ್ ಬತ್ತದ ಉತ್ತಮ ಇಳುವರಿಯಲ್ಲಿ ಮುಖ್ಯವಾದ ಪಾತ್ರವಹಿಸುತ್ತದೆ. ಬತ್ತವನ್ನು ಸಿಲಿಕಾನಿನ ಶೇಖಕ ಅಥವಾ ಕಣಜ ಎಂದು ಹೇಳುತ್ತಾರೆ. ಅಂದರೆ ಬೇರೆ ಯಾವುದೇ ಪೋಷಕಾಂಶಗಳಿಗಿಂತ, ಬತ್ತದ ಬೆಳೆ ಸುಮಾರು ೨೩೦ ರಿಂದ ೪೭೦ ಕೆ.ಜಿ.ಯಷ್ಟು ಸಿಲಿಕಾನನ್ನು ಮಣ್ಣಿನಿಂದ ಹೀರುತ್ತದೆ. ಈ ರೀತಿ ಹೀರಲ್ಪಡುವ ಪ್ರಮಾಣ, ಸಾರಜನಕಕ್ಕಿಂತ ಸುಮಾರು ಶೇ. ೧೦೮ ಕ್ಕಿಂತಲೂ ಹೆಚ್ಚಾಗಿರುತ್ತದೆ. ಹೀಗಾಗಿ, ಪ್ರತಿ ವರ್ಷವೂ ಬತ್ತದ ವ್ಯವಸಾಯದಿಂದಾಗಿ ಮಣ್ಣಿನಲ್ಲಿ ಸುಲಭವಾಗಿ ದೊರೆಯುವ ಸಿಲಿಕಾನಿನ ಕೊರತೆ ಕಾಣುತ್ತದೆ. ಇದರಿಂದಾಗಿ, ಬತ್ತದ ಇಳುವರಿ ಗಣನೀಯವಾಗಿ ಕಡಿಮೆಯಾಗುತ್ತಿರುವುದು ಉಷ್ಣವಲಯದ ಅನೇಕ ಪ್ರದೇಶಗಳಲ್ಲಿ ಕಂಡು ಬರುತ್ತಿದೆ.

ಸಮಗ್ರ ಪೋಷಕಾಂಶಗಳ ನಿರ್ವಹಣೆಯಲ್ಲಿ, ಹೆಚ್ಚಿನ ಪ್ರಾಮುಖ್ಯತೆ ಮೂಲ ಪೋಷಕಾಂಶಗಳಾದ ಸಾರಜನಕ, ರಂಜಕ ಮತ್ತು ಪೊಟ್ಯಾಷ್‌ಗಳಿಗಷ್ಟೇ ಸೀಮಿತವಾಗಿದ್ದು, ಇದುವರೆವಿಗೂ ಬತ್ತದ ಬೆಳೆಯಲ್ಲಿ ಸಿಲಿಕಾನಿಗೆ ಪ್ರಾಮುಖ್ಯತೆ ಕೊಡದೆ ಇರುವುದಕ್ಕೆ ಎರಡು ಕಾರಣಗಳಿವೆ.

ಅ. ಇದುವರೆವಿಗೂ ಸಹ ಸಿಲಿಕಾನ್‌ನ್ನು ಸಸ್ಯಗಳ ಬೆಳವಣಿಗೆಯಲ್ಲಿ ಒಂದು ಪ್ರಮುಖವಾದ ಮೂಲವಸ್ತು ಎಂದು ನಿರ್ಧರಿಸದೇ ಇರುವುದು.

ಆ. ಸಿಲಿಕಾನ್, ಹೇರಳವಾಗಿ ಅಂದರೆ ಪ್ರತಿಶತ ೨೮ರಷ್ಟು ಭೂಮಿಯ ಪದರಗಳಲ್ಲಿ ವಿವಿಧ ಸಂಯುಕ್ತ ಖನಿಜಗಳ ರೂಪದಲ್ಲಿ ದೊರೆಯುತ್ತದೆ. ಇದರಿಂದಾಗಿ ಮಣ್ಣಿನಲ್ಲಿ ಸಿಲಿಕಾನಿನ ಕೊರತೆ ಒಂದು ಸಮಸ್ಯೆಯೇನಲ್ಲ ಎಂದು ನಂಬಲಾಗಿದೆ.

ಕರ್ನಾಟಕದಲ್ಲೇ ಸುಮಾರು ೧೮೦೦ ಬತ್ತದ ಮಿಲ್ಲುಗಳಿದ್ದು, ಮುಖ್ಯವಾಗಿ ಅಚ್ಚುಕಟ್ಟು ಪ್ರದೇಶ ಮತ್ತು ನೀರಾವರಿ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿವೆ. ಬತ್ತದ ಮಿಲ್ಲುಗಳಿಂದ ಬಂದಂತಹ ಬತ್ತದ ಹೊಟ್ಟನ್ನು ಮುಖ್ಯವಾಗಿ ಅಂದರೆ ಶೇಕಡ ೫೦ರಷ್ಟು ಉರುವಲಾಗಿ ಬತ್ತದ ಮಿಲ್ಲುಗಳಲ್ಲಿ, ಹೋಟೇಲಿನಲ್ಲಿ, ಇಟ್ಟಿಗೆ ಸುಡುವುದಕ್ಕಾಗಿ ಉಪಯೋಗಿಸುತ್ತಾರೆ. ಬತ್ತದ ಹೊಟ್ಟಿನಲ್ಲಿ ಪ್ರತಿ ಶತ ೮ ರಷ್ಟು ಸಿಲಿಕಾನ್ ಅಂಶವಿರುತ್ತದೆ. ಇದರಿಂದ ಬರುವ ಬೂದಿಯು ಕಪ್ಪು ಅಥವಾ ಕಂದು ಮಿಶ್ರಿತವಾಗಿದ್ದು, ಶೇಕಡ ೩೨ ರಿಂದ ೪೦ರಷ್ಟು ಸಿಲಿಕಾನನ್ನು ಹೊಂದಿರುತ್ತದೆ. ಅಂದಾಜಿನ ಪ್ರಕಾರ ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ೧.೫ ರಿಂದ ೧.೯ ಲಕ್ಷ ಟನ್‌ಗಳಷ್ಟು ಬೂದಿ ದೊರಕುತ್ತದೆ. ಈ ಬೂದಿಯನ್ನು ಬತ್ತದ ಗದ್ದೆಗಳಿಗೆ ಬಳಸಿದ್ದೇ ಆದಲ್ಲಿ, ಬತ್ತಕ್ಕೆ ಬೇಕಾಗುವ ಸಿಲಿಕಾನನ್ನು ದೊರಕಿಸಿ ಕೊಡುವಲ್ಲಿ ಯಶಸ್ವಿಯಾದೀತು.

ಈಗಾಗಲೇ, ನಮ್ಮ ರೈತರು, ಬತ್ತದ ಸಸಿ ಮಡಿಯಲ್ಲಿ ಮತ್ತು ಗದ್ದೆಗಳಲ್ಲಿ ಈ ಬೂದಿಯನ್ನು ಬಳಸುತ್ತಿದ್ದಾರೆ. ಪ್ರತಿ ಚದರ ಮೀಟರ್ ಸಸಿ ಮಡಿಗೆ ಸುಮಾರು ಅರ್ಧ ಕೆಜಿಯಿಂದ ಒಂದು ಕೆಜಿಯಷ್ಟು ಬೂದಿಯನ್ನು ಬಳಸಿದರೆ, ಉತ್ತಮವಾದ ಆರೋಗ್ಯವಾದ ಸಧೃಡ ಸಸಿಗಳನ್ನು ಬೆಳೆಯಬಹುದು ಎಂದು ತಿಳಿದು ಬಂದಿದೆ. ಆದರೆ, ಮುಖ್ಯವಾಗಿ ಬತ್ತದ ಗದ್ದೆಗಳಲ್ಲಿ ಈ ಬೂದಿಯನ್ನು ಯಾವಾಗ, ಹೇಗೆ, ಎಷ್ಟು ಪ್ರಮಾಣದಲ್ಲಿ ಹಾಕಬೇಕು ಎಂಬುದಕ್ಕೆ ಸಂಶೋಧನೆಯ ಅಗತ್ಯವಿದೆ ಎಂದು ಮಣ್ಣು ವಿಜ್ಞಾನಿಗಳ ಅನಿಸಿಕೆಯಾಗಿದೆ. ಇದಲ್ಲದೆ ಪ್ರತಿ ವರ್ಷವೂ ಬೂದಿಯನ್ನು ಗದ್ದೆಗಳಿಗೆ ಹಾಕಿದ್ದೇ ಆದರೆ ಏನಾದರೂ ತೊಂದರೆಯೇ ಎನ್ನುವುದಕ್ಕೆ ಮಾಹಿತಿಯ ಅವಶ್ಯಕತೆಯಿದೆ.

ಕೆಲವು ರೈತರು, ಈ ಬೂದಿಯನ್ನು ಅಡಿಕೆ, ತೆಂಗು ಮತ್ತು ಇನ್ನಿತರ ತೋಟದ ಬೆಳೆಗಳಿಗೆ ಬಳಸುತ್ತಿದ್ದಾರೆ. ಈ ರೀತಿ ಹಾಕುವುದರಿಂದ, ಆ ಬೆಳೆಗಳಿಗೆ ಸಿಲಿಕಾನ್ ದೊರಕುವುದಲ್ಲದೆ, ಬೇರೆ ಪೋಷಕಾಂಶಗಳು ದೊರಕುವುದಕ್ಕೂ ಸಹಾಯವಾಗಿ, ಉತ್ತಮ ಇಳುವರಿ ಪಡೆಯಲು ಸಹಕಾರಿಯಾಗಬಹುದು. ಆದರೆ, ಬತ್ತದ ಜಮೀನಿನಿಂದ ಬೂದಿಯ ರೂಪದಲ್ಲಿ ಪೋಲಾದ ಸಿಲಿಕಾನನ್ನು ಪುನಃ ಸರಿದೂಗಿಸಲು ಸಾಧ್ಯವಾಗುವುದೇ? ಆದ್ದರಿಂದ ಇಂತಹ ಪಳೆಯುಳಿಕೆಗಳನ್ನು (ಬೂದಿ, ಹೊಟ್ಟು) ಬತ್ತದ ಬೆಳೆಗೆ ಮರು ಬಳಕೆ ಮಾಡಿದಲ್ಲಿ ಸಿಲಿಕಾನಿನ ಮಹತ್ವತೆಗೆ, ಒತ್ತು ಕೊಡಲು ಸಾರ್ಥಕವಾದೀತು.

–ಡಾ॥ ಎನ್.ಬಿ.ಪ್ರಕಾಶ್,
ಸಹಾಯಕ ಪ್ರಾಧ್ಯಾಪಕರು–ಮಣ್ಣು ವಿಜ್ಞಾನ,
ಕೃಷಿ ಕಾಲೇಜು, ಶಿವಮೊಗ್ಗ

ದುರುಪಯೋಗಕ್ಕೆ ಒಳಗಾಗುತ್ತಿರುವ 'ಹಿತ್ತಲಗಿಡ'

ಬೇವಿನ ಕಥೆ

–ಸಿ.ಎಮ್.ಕೇತ್‌ಕರ್

ಯುಗಾದಿ ಹಬ್ಬವೆಂದೊಡನೆ ನೆನಪಿಗೆ ಬರುವ ಬೇವು, ಅಮ್ಮ ಅಥವಾ *chicken pox* ಎದ್ದಾಗ ಕೂಡಾ ನೆನಪಿಗೆ ಬರುತ್ತದೆ. ಈ ಬೇವು ಮನುಷ್ಯರಿಗೆ ಮಾತ್ರವಲ್ಲದೆ, ಗಿಡಗಳಿಗೂ ಔಷಧಿ. ಜೊತೆಗೆ ಕೃಷಿಯಲ್ಲಿ ಇದರ ಪಾಲು ಹಲವಾರು ರೀತಿಯಲ್ಲಿ.

ಗೊಬ್ಬರವಾಗಿ ಬೇವು:

ಬೇವಿನ ಹಿಂಡಿಯಲ್ಲಿ ಸುಮಾರು ಶೇಕಡಾ ೬ ರಷ್ಟು ಸಾರಜನಕವಿದೆ. ಸಾರಜನಕವನ್ನು ಗಿಡಗಳಿಗೆ ಕೊಡಲು ಸಾಮಾನ್ಯವಾಗಿ ಬಳಸುವ ರಸಗೊಬ್ಬರ ಯೂರಿಯಾ. ಯೂರಿಯದಲ್ಲಿ ಶೇಕಡಾ ೪೬ರಷ್ಟು ಸಾರಜನಕವಿರುತ್ತದೆ. ಆದರೆ, ಹೆಚ್ಚಿನ ಪ್ರಮಾಣದಲ್ಲಿ ಈ ಸಾರಜನಕ ಅಮೋನಿಯಾವಾಗಿ ಪರಿವರ್ತನೆ ಹೊಂದಿ ಗಾಳಿಗೆ, ನೀರಿಗೆ ಸೇರಿ ಸೋರಿ ಹೋಗುತ್ತದೆ. ಹೀಗಾಗಿ ಯೂರಿಯಾ ಹಾಕಿದಾಗ ಗಿಡಗಳಿಗೆ ಸಿಗುವುದು ಕೇವಲ ಶೇಕಡ ಹತ್ತರಿಂದ ೩೪ ರಷ್ಟು.

ಇದೇ ಯೂರಿಯವನ್ನು ಬೇವಿನೆಣ್ಣೆ ಅಥವಾ ಬೇವಿನ ಹಿಂಡಿಯೊಂದಿಗೆ ಬೆರೆಸಿ ಹಾಕಿದಾಗ ಯೂರಿಯಾದ ಅನುಪಯುಕ್ತ ಪರಿವರ್ತನೆ ಕಡಿಮೆಯಾಗಿ ಸಾರಜನಕ ನಿಧಾನವಾಗಿ ಗೊಬ್ಬರದಿಂದ ಬಿಡುಗಡೆ ಹೊಂದಿ ಸತತವಾಗಿ ಗಿಡಗಳಿಗೆ ದೊರೆಯುತ್ತದೆ.

ಬೇವಿನ ಜೊತೆಗೆ ಬೆರೆಸಿದ ಯೂರಿಯಾದ ಬಳಕೆಯಿಂದ ಗಿಡಗಳಿಗೆ ಸಾರಜನಕ ಪೂರ್ಣ ಪ್ರಮಾಣದಲ್ಲಿ ದೊರೆತು ಇಳುವರಿ ಹೆಚ್ಚುತ್ತದೆ ಎನ್ನುವ ಅಂಶ ಭತ್ತ, ಗೋದಿ, ಕಬ್ಬು,.ಹತ್ತಿ, ಟೊಮೆಟೋ, ಬಾಳೆ, ಪಪ್ಪಾಯಿ ಹೀಗೆ ಹತ್ತಾರು ಬೆಳೆಗಳಲ್ಲಿ ಕಂಡುಬಂದಿದೆ.

ಕೀಟನಾಶಕವಾಗಿ:

Nematode ಅಥವಾ ಗಂಟುಹುಳುಗಳ ನಿಯಂತ್ರಣಕ್ಕೆ ಕೂಡಾ ಈ ಬೇವು ಉಪಯೋಗವಾಗುತ್ತದೆ. ವೀಳ್ಯದೆಲೆ, ಏಲಕ್ಕಿ, ಎಲೆಕೋಸು, ಹೂಕೋಸು, ಟೊಮೆಟೊ, ಮೆಣಸಿನಕಾಯಿ, ಬದನೆ, ಬೆಂಡೆ ಈ ಮುಂತಾದ ಬೆಳೆಗಳನ್ನು ಬೆಳೆಯುವ ಮೊದಲು ಸಸಿಗಳನ್ನು ಬೇವಿನ ರಸದಲ್ಲಿ ಉಪಚರಿಸಿ ನಾಟಿ ಮಾಡುವುದರಿಂದ ಗಂಟು ಹುಳುಗಳ ಬಾದೆ ತಪ್ಪುತ್ತದೆ. ಬೇವಿನೆಣ್ಣೆ ಗಿಡಗಳಿಗೆ ಸಿಂಪಡಿಸುವುದು ಕೀಟನಾಶಕವಾಗಿ ಕೂಡಾ ಸಹಾಯ ಮಾಡುತ್ತದೆ.

ಸ್ಥಳೀಯ ಜನರಿಗೆ ಇಷ್ಟೆಲ್ಲಾ ಉಪಯೋಗ ದೊರಕಿಸಿಕೊಡಬಹುದಾಗಿರುವ ಬೇವು ಇಂದು ವಿವಾದಕ್ಕೆ ಒಳಪಟ್ಟಿದೆ.

ಬೇವಿನ ಪೇಟೆಂಟ್

ಅಮೇರಿಕಾದ ಡಬ್ಲ್ಯು.ಆರ್.ಗ್ರೇಸ್ ಮತ್ತು ಕಂಪೆನಿ ಎಂಬ ಸಂಸ್ಥೆ ಬೇವಿನೆಣ್ಣೆಯಲ್ಲಿನ ಶಿಲೀಂದ್ರ ನಾಶಕ ಗುಣವನ್ನು ಗುರುತಿಸಿದಕ್ಕಾಗಿ ಪೇಟೆಂಟ್ ಪಡೆದುಕೊಂಡಿದೆ. ಭಾರತ ಮತ್ತು ಐರೋಪ್ಯ ರಾಷ್ಟ್ರಗಳ ಹಲವಾರು ಸರ್ಕಾರೇತರ ಸಂಸ್ಥೆಗಳು ಈ ಪೇಟೆಂಟ್‌ನ್ನು ಪ್ರಶ್ನಿಸಿವೆ.

ಗ್ರಾನೈಟ್ ಕಲ್ಲಿನ ಕಥೆ

ಜಗತ್ತಿನ ಒಟ್ಟು ಗ್ರಾನೈಟ್ ಕಲ್ಲಿನ ಸಂಪನ್ಮೂಲದಲ್ಲಿ ೨೦ರಷ್ಟು ಹಾಗೇ ಅರ್ಧದಷ್ಟು ವೈವಿಧ್ಯಮಯ ಬಣ್ಣಗಳು ಭಾರತದಲ್ಲಿದೆ. ಕಚ್ಚಾ ಗ್ರಾನೈಟ್ ಬ್ಲಾಕ್‌ಗಳ ಉತ್ಪಾದನೆಯಲ್ಲಿ ಭಾರತದ್ದು ಐದನೇ ಸ್ಥಾನವಾದರೆ ಇದರ ರಫ್ತು ವಹಿವಾಟಿನಲ್ಲಿ ಭಾರತದ್ದು ಮೂರನೆಯ ಸ್ಥಾನವಾಗಿದೆ. ಇಡೀ ಭಾರತದಲ್ಲೇ ನಮ್ಮ ಕರ್ನಾಟಕ ಈ ಗ್ರಾನೈಟ್ ನಿಕ್ಷೇಪದಲ್ಲಿ ಮೂರನೆಯ ಸ್ಥಾನ ಪಡೆದಿದೆ. ನಮ್ಮ ಕರ್ನಾಟಕದ ಈ ಗ್ರಾನೈಟ್‌ಗೆ ವಿಶ್ವದಾದ್ಯಂತ ಅಧಿಕ ಬೇಡಿಕೆ ಬರುತ್ತಿದ್ದು ಭಾರತ ೧೯೯೮ರ ವರ್ಷದಂದು ಸುಮಾರು ೧೫೦೦ ಕೋಟಿ ರೂ.ಗಳಷ್ಟು ಮೌಲ್ಯದ ಗ್ರಾನೈಟ್ ವಸ್ತುಗಳನ್ನು ರಫ್ತು ಮಾಡಿದೆ. ಇದರಲ್ಲಿ ಶೇ. ೬೫ ಭಾಗ ಸಂಸ್ಕರಿಸಿ, ಪಾಲೀಶ್ ಮಾಡುವ ಮೂಲಕ ಅಂದರೆ ಮೌಲ್ಯ ವರ್ಧನೆ, (Value addition) ಯಿಂದ ಬಂದಿದೆ. ಆದರೆ ಸೂಕ್ತ ಒಡೆತನ ಇಲ್ಲದಿರುವುದು ಪರಿಸರದ ಮೇಲೆ ಇದನ್ನು ತೆಗೆಯುವುದರಿಂದಾಗುವ ದುಷ್ಪರಿಣಾಮ ಹಾಗೇ ಸ್ಥಳಿಯರಿಗೆ ಇದರ ರಫ್ತಿನಲ್ಲಿ ಸೂಕ್ತ ಪಾಲುದೊರೆಯದಿರುವುದು ಇವೆಲ್ಲಾ ಗಮನಿಸಿದರೆ ಈ ಅಮೂಲ್ಯ ಸ್ಥಳಿಯ ಸಂಪನ್ಮೂಲದ ಸರಿಯಾದ ಬಳಕೆ ಆಗುತ್ತಿದೆಯೇ ಎಂಬ ವಿಚಾರದ ಬಗ್ಗೆ ಸಂಶಯವೇಳುತ್ತದೆ.

ಮೂಲ: ಬಿ.ಎಂ.ಹನೀಫ್,
ಪ್ರಜಾವಾಣಿ,
೧೦-೨-೧೯೯೯

ಮಕ್ಕಳು ಅರಸಿತಂದ ನಾಟಿ ಔಷಧಿ ಪದ್ಧತಿಗಳು

ಸರ್ಪ ಸುತ್ತು, ಇಸುಬು, ಚರ್ಮರೋಗ

೫೦ ಗ್ರಾಂ ಮೆಣಸು, ೫೦ಗ್ರಾಂ ಲವಂಗ, ೫೦ಗ್ರಾಂ ಅವರೇ ಬೇಳೆ, ೫೦ಗ್ರಾಂ ಎಳ್ಳೆಣ್ಣೆ, ೫೦ಗ್ರಾಂ ಬೆಳ್ಳುಳ್ಳಿ, ೫೦ಗ್ರಾಂ ಅರಿಶಿನಪುಡಿ, ೫೦ಗ್ರಾಂ ಈರುಳ್ಳೀ, ೫ ನಿಂಬೆಹಣ್ಣು, ೫೦ಗ್ರಾಂ ಕಹಿಬೇವಿನ ಎಲೆ, ೧ ಪಾಕೆಟ್ ಸಾರಾಯಿ.

ಮಾಡುವ ವಿಧಾನ: ಮೇಲೆ ತಿಳಿಸಿದ ಎಲ್ಲಾ ವಸ್ತುಗಳನ್ನು ಸ್ವಚ್ಛವಾದ ರುಬ್ಬುವ ಕಲ್ಲಿನಲ್ಲಿ ಅರೆದು ಹಿತ್ತಾಳೆ ಪಾತ್ರೆಯಲ್ಲಿ ಕಲಸಿ, ೧ ಪ್ಯಾಕೆಟ್ ಸಾರಾಯಿ ಹಾಗೂ ೯ ಹನಿ ಎಕ್ಕ ಹಾಲಿನೊಂದಿಗೆ ಮಿಶ್ರ ಮಾಡಿ ಇಟ್ಟು ಕೊಳ್ಳುವುದು. ನಂತರ ಬಂಗಾರದಲ್ಲಿ (ಚಿನ್ನ) ಬಾಲ ಮತ್ತು ಹೆಡೆಯ ಕಡೆ ಸುಡಬೇಕು. ಸುಟ್ಟ ನಂತರ ಮೇಲೆ ತಯಾರಿಸಿದ ಔಷಧಿಯನ್ನು ಕೋಳಿ ಪುಕ್ಕದಲ್ಲಿ ಹಚ್ಚುವುದು.

ದಮ್ಮು (ಅಸ್ತಮಾ)

ಬೇಕಾಗುವ ಸಾಮಾನು: ೫೦ಗ್ರಾಂ ಮೆಣಸು, ೫೦ಗ್ರಾಂ ಲವಂಗ, ೫೦ಗ್ರಾಂ ಜೀರಿಗೆ, ೫೦ಗ್ರಾಂ ಒಣ ಶುಂಠಿ, ೫೦ಗ್ರಾಂ ಹಿಪ್ಪಳಿ (*Piper longum*), ೫೦ಗ್ರಾಂ ಮಸಾಲೆ ಚಕ್ಕೆ, ೫೦ಗ್ರಾಂ ಬೆಳ್ಳುಳ್ಳಿ, ಬೆಲ್ಲ ಒಂದು ಗುಳಿಗೆ, ೧೦ ಸಕ್ಕರೆ ಮೆಣಸು.

ಮಾಡುವ ವಿಧಾನ: ಮೇಲೆ ತಿಳಿಸಿದ ಎಲ್ಲಾ ವಸ್ತುಗಳನ್ನು ಅರೆದು ಗುಳಿಗೆ ಮಾಡಿ, ಒಂದು ದಿನಕ್ಕೆ ಒಂದು ಕಪ್ ನೀರಿಗೆ ೩ ಗುಳಿಗೆ ಹಾಕಿ ಅರ್ಧ ಕಪ್ ಆಗುವ ತನಕ ಕುದಿಸಬೇಕು ಬಿಸಿ ಇರುವಾಗಲೇ ದಿನಕ್ಕೆ ೩ ಬಾರಿ (ಬೆಳಿಗ್ಗೆ ಖಾಲಿ ಹೊಟ್ಟೆಗೆ, ಸಂಜೆ ಮಲಗುವ ಮುನ್ನ) ಸೇವಿಸುವುದು.

ಮುಟ್ಟಿನ ಹೊಟ್ಟೆನೋವು

ಬೇಕಾಗುವ ಸಾಮಾನು: ೧೦ ಮೆಣಸು, ೧೦ ಲವಂಗ, ಒಂದು ಬೆಳ್ಳುಳ್ಳಿ, ೧೦ಗ್ರಾಂ ಜೀರಿಗೆ, ೧೦೦ಗ್ರಾಂ ಕರಿಬೇವಿನ ಎಲೆ.

ಮಾಡುವ ವಿಧಾನ: ಈ ಎಲ್ಲಾ ಸಾಮಾನುಗಳನ್ನು ಚೆನ್ನಾಗಿ ಅರೆದು ಖಾಲಿ ಹೊಟ್ಟೆಯಲ್ಲಿ ೨೧ ದಿನ ದಿನಕ್ಕೊಂದು ಗುಳಿಗೆಯಂತೆ ತೆಗೆದುಕೊಳ್ಳುವುದು.

ತೊಡೆವಾಳ

ಬೇಕಾಗುವ ಸಾಮಾನು: ಮಧ್ಯಾಹ್ನದ ಮಲ್ಲಿಗೆ ಗೆಡ್ಡೆ, ೧೦ಗ್ರಾಂ ಮೆಣಸು, ೧೦ಗ್ರಾಂ ಲವಂಗ, ೩ ನಿಂಬೆ ಹಣ್ಣು, ಸಾಸಿವೆ ೧೦ಗ್ರಾಂ, ೯ ವಿಳ್ಯದೆಲೆ ತೊಟ್ಟು.

ಮಾಡುವ ವಿಧಾನ: ಇವುಗಳನ್ನು ಚೆನ್ನಾಗಿ ಅರೆದು ನೋವಿರುವ ಜಾಗದಲ್ಲಿ ದಿನಕ್ಕೆ ೩ ಬಾರಿ ಹಚ್ಚುವುದು. ಒಂದೆರಡು ದಿನದಲ್ಲಿ ಒಡೆದ ನಂತರ ಬಿಸಿನೀರಿನಲ್ಲಿ ತೊಳೆದು ಕೊಬ್ಬರಿ ಎಣ್ಣೆ ಹಚ್ಚಿ ರಾಗಿ ಮುದ್ದೆ ಕಾವು ಕೊಡುವುದು.

ಬಿಳಿ ಸೆರಗು

ಬೇಕಾಗುವ ಸಾಮಾನು: ಅವರಿಕೆ ತೆಪ್ಪೆ, ಕಲ್ಲು ಸಕ್ಕರೆ, ಕಲ್ಲುನಾರು, ಜೀರಿಗೆ, ಕುಂಕುಮ, ಕೇಸರಿ.

ಮಾಡುವ ವಿಧಾನ: ಅವರಿಗೆ ತೆಪ್ಪೆ ಪುಡಿ ಮಾಡಿ ನೆರಳಿನಲ್ಲಿ ಒಣಗಿಸುವುದು, ನಂತರ ಕುಟ್ಟಿ ಪುಡಿ ಮಾಡಿ, ೧ ಲೀಟರ್ ನೀರಿಗೆ ೧೦೦ಗ್ರಾಂ ಪುಡಿ ಹಾಕಿ ಕುದಿದ ನಂತರ ಬಸಿದು ಮೇಲೆ ತಿಳಿಸಿದ ಎಲ್ಲಾ ವಸ್ತುಗಳನ್ನು ಹಾಕಿ ೧ ಲೋಟ ಹಾಲಿನೊಂದಿಗೆ ಬೆರೆಸಿ ೩ ದಿನಗಳು ೩ ಹೊತ್ತಿನಲ್ಲೂ ಕುಡಿಯುವುದು.

ಪಥ್ಯ: ಗಂಜಿ ಅನ್ನ, ಮಜ್ಜಿಗೆ ಅನ್ನ, ಹಾಲು ಅನ್ನ ಸೇವಿಸುವುದು.

ಸಂಗ್ರಹ: ತಿಮ್ಮಪ್ಪ, ಯರೇಹಳ್ಳಿ ಕಾಲೋನಿ, ಕನಕಪುರ

ರಕ್ತ ಬೇದಿ

ಹುಣಸೇ ಸೊಪ್ಪು ಒಂದು ಮುಷ್ಠಿ, ಲವಂಗ ೩, ಮೆಣಸು ೩, ಬೆಳ್ಳುಳ್ಳಿ ೩ ಒಡಕಲು.

ಮಾಡುವ ವಿಧಾನ: ಹುಣಸೇ ಸೊಪ್ಪನ್ನು ಮೇಲೆ ತಿಳಿಸಿದ ವಸ್ತುಗಳ ಜೊತೆಗೆ ಹಾಕಿ ಅರೆದು ಒಂದು ಕಪ್ ರಸ ತೆಗೆದು ಕತ್ತಿಯನ್ನು ಬಿಸಿ ಮಾಡಿ ಅರೆದ ರಸದೊಳಗೆ ಹಾಕಿ ಬಿಸಿ ಆದ ನಂತರ ಬೆಳಿಗ್ಗೆ ಖಾಲಿ ಹೊಟ್ಟೆಗೆ ಕುಡಿಯುವುದು.

ಮೂಲವ್ಯಾದಿ

ಬಿಳಿ ಸೌತೆ ೧, ೧ ಬಿಳಿ ಮೂಲಂಗಿ, ಬಿಳಿ ಈರುಳ್ಳಿ.

ಮಾಡುವ ವಿಧಾನ: ಇವುಗಳನ್ನು ಅರೆದು ಬೆಣ್ಣೆಯೊಳಗೆ ಒಗ್ಗರಣೆ ಮಾಡಿ ಖಾಲಿ ಹೊಟ್ಟೆಯಲ್ಲಿ ೨೧ ದಿನಗಳ ತನಕ ತಿನ್ನಬೇಕು.

ಅಳಲೇ ಕಾಯಿ

ಹುಳು ಕಡ್ಡಿ

ಚೌಳು ಮಣ್ಣು, ಕೆನೆ ಸುಣ್ಣ, ಹಸು ಕರುವಿನ ಮೂತ್ರದಲ್ಲಿ ಅರೆದು ಉಪ್ಪು ಹಾಕಿ ಹಚ್ಚುವುದು.

ಇಸುಬು

ಆಡಿನ ಪಿಚಿಕೆ, ಮೆಣಸು, ಲವಂಗ, ಅರಿಶಿನ, ಬೆಳ್ಳುಳ್ಳಿ, ಕಣಗಲು ಹಾಲು , ರಸ ಕರ್ಪೂರ.

ಮಾಡುವ ವಿಧಾನ: ಎಲ್ಲವನ್ನು ಅರೆದು ಹಚ್ಚುವುದು. ನೀರು ಸೋಂಕಿಸಬಾರದು.

ಪಿತ್ತ

ಜೀರಿಗೆ ೧೦ಗ್ರಾಂ, ಕಲ್ಲು ನಾರು ೫ಗ್ರಾಂ, ಉಪ್ಪು ೫ಗ್ರಾಂ, ಕರಿ ಎಳ್ಳಿಕಾಯಿ ೧.

ಮಾಡುವ ವಿಧಾನ: ಮೇಲೆ ತಿಳಿಸಿದ ವಸ್ತುಗಳನ್ನು ಪುಡಿಮಾಡಿ, ಎಳ್ಳಿಕಾಯಿ ಹೋಳು ಮಾಡಿ ಈ ಪುಡಿಯನ್ನು ಹಾಕಿ, ತೆಳು ಬಟ್ಟೆಯಲ್ಲಿ ಕಟ್ಟಿ, ಅಗಲವಾದ ಪಾತ್ರೆಯಲ್ಲಿ ಹಾಕಿ ರಾತ್ರಿ ಸೂರಿನ ಮೇಲೆ ಇಡುವುದು. ಬೆಳಿಗ್ಗೆ ಖಾಲಿ ಹೊಟ್ಟೆಗೆ ಇದರ ರಸವನ್ನು ಸೇವನೆ ಮಾಡುವುದು.(ಒಂದು ವಾರ ಮಾಡುವುದು)

ಬಿಳಿಸೆರಗು

ಬೇಕಾಗುವ ಸಾಮಾನು: ತಂಗಡಿಕೆ ಹೂವು (ಅವರಿಕೆ)೧/೨ ಕೆ.ಜಿ., ೧೦೦ಗ್ರಾಂ ಕಲ್ಲು ಸಕ್ಕರೆ, ೧೦ಗ್ರಾಂ ಕಲ್ಲುನಾರು, ಗಸೆಗಸೆ ೨೦ಗ್ರಾಂ , ಯಾಲಕ್ಕಿ ೧೦ಗ್ರಾಂ, ಜೀರಿಗೆ ೧೦ಗ್ರಾಂ, ಜೇನುತುಪ್ಪ ೧೦೦ಗ್ರಾಂ.

ಮಾಡುವ ವಿಧಾನ: ಇವುಗಳನ್ನು ಪುಡಿ ಮಾಡಿ, ಒಂದು ಹೊಸದಾದ ಮಡಿಕೆಗೆ ಹಾಕಿಡಬೇಕು. ೧೩ ದಿನಗಳ ನಂತರ ತೆಗೆದು ಒಂದೊಂದು ಚಮಚ ಖಾಲಿ ಹೊಟ್ಟೆಗೆ ತೆಗೆದುಕೊಳ್ಳೂವುದು.

ಪಥ್ಯ: ಹಸಿಮೆಣಸಿನ ಕಾಯಿ, ಅಲೂಗೆಡ್ಡೆ, ಬದನೆಕಾಯಿ, ಕಡಲೆಬೇಳೆ, ಅವರೆಬೇಳೆ, ಜೋಳ ತಿನ್ನಬಾರದು.

ಹಲ್ಲುನೋವು:

ಸಾಮಾನುಗಳು: ನೆಲಗುಳ್ಳ *(Solanum laeve)*, ನಾಟಿ ಹಸುವಿನ ಸಗಣಿ.

ಮಾಡುವ ವಿಧಾನ: ಸಗಣಿಯೊಳಗೆ ನೆಲಗುಳದ ಕಾಯಿಯನ್ನು ಇಟ್ಟು ಮುಚ್ಚುವುದು. ನಂತರ ಬೆಂಕಿಯಲ್ಲಿ ಸುಡುವುದು. ತಣ್ಣಗಾದ ನಂತರ ಪುಡಿ ಮಾಡಿ ಸ್ವಲ್ಪ ಉಪ್ಪು ಸೇರಿಸಿ ಪ್ರತಿನಿತ್ಯ ಹಲ್ಲನ್ನು ಈ ಒಂದು ಪುಡಿಯಲ್ಲಿ ಉಜ್ಜುವುದು. ಹಲ್ಲು ಗಟ್ಟಿಯಾಗುವುದರ ಜೊತೆ ಹಲ್ಲು ನೋವು ಮಾಯ.

ದೇಹಪುಷ್ಠಿ (ಲೇಹ್ಯ) ಧಾತು ಪುಷ್ಠಿ, ಹೊಟ್ಟೆನೋವು, ಜ್ವರ, ಮೈ ಕೈ ನೋವು

ಸಾಮಾನುಗಳು: ಅಶ್ವಗಂಧಿ ಗಡ್ಡೆ (*Withanica somnifera*) ೧/೨ಕೆ.ಜಿ, ಕಲ್ಲುಸಕ್ಕರೆ ೧೦೦ ಗ್ರಾಂ, ಜೀರಿಗೆ ೨೦ ಗ್ರಾಂ, ಗಸೆಗಸೆ ೨೦ ಗ್ರಾಂ, ಯಾಲಕ್ಕಿ ೨೦ ಗ್ರಾಂ, ನೆಲ ಅವರಿಕೆ ೧/೪ ಕೆ.ಜಿ, ಕಲ್ಲು ನಾರು ೫ಗ್ರಾಂ.

ವಿಧಾನ: ಅಶ್ವಗಂಧಿ ಗಡ್ಡೆ, ನೆಲ ಅವರಿಕೆ ಒಣಗಿಸಿ (ನೆರಳಲ್ಲಿ) ಎಲ್ಲವನ್ನು ಸೇರಿಸಿ ಪುಡಿ ಮಾಡಿ ಇಟ್ಟುಕೊಳ್ಳಬೇಕು, ಪ್ರತಿ ದಿನ ಖಾಲಿ ಹೊಟ್ಟೆಗೆ ಒಂದು ಟೀ ಚಮಚ ೧ ಲೋಟ ಹಾಲಿನೊಳಗೆ ಸೇರಿಸಿ ಕುಡಿಯುವುದು.

ಮಾಹಿತಿ: ಬಸಪ್ಪ, ಭತ್ತನ ಗದ್ದೆ, ಕನಕಪುರ.

ಶೀತ, ಕೆಮ್ಮು, ಜ್ವರ

ಬೇಕಾಗುವ ಸಾಮಾನು: ೧/೨ ಕೆ.ಜಿ. ತುಳಸೀ ಎಲೆ, ೫೦ಗ್ರಾಂ ಜೀರಿಗೆ, ೨೫ ಗ್ರಾಂ ಶುಂಠಿ, ೫೦ಗ್ರಾಂ ಬಿಳಿಬೆಲ್ಲ.

ಮಾಡುವ ವಿಧಾನ: ತುಳಸೀ ಎಲೆಯ ರಸ(೧/೨ ಲೀಟರ್) ತೆಗೆದು ಬೆಲ್ಲ ಹಾಕಿ ಕುದಿಸಿ ಮರಳಿ ೧/೪ ಲೀಟರ್ ಆದ ನಂತ ಮೇಲೆ ತಿಳಿಸಿದ ಸಾಮಾನುಗಳ ಪುಡಿಯನ್ನು ಹಾಕಿ ಕಲಕುತ್ತಾ ಇರಬೇಕು, ಗಟ್ಟಿಯಾಗಿ ಲೇಹ್ಯದ ರೂಪದಲ್ಲಿ ಆಗುತ್ತದೆ. ದಿನಕ್ಕೆ ೨ ಬಾರಿ ಖಾಲಿ ಹೊಟ್ಟೆಗೆ (ಬೆಳಿಗ್ಗೆ) ರಾತ್ರಿ ಮಲಗುವಾಗ ಒಂದೊಂದು ಚಮಚದಂತೆ ತೆಗೆದುಕೊಳ್ಳುವುದು. (ಚಿಕ್ಕವರಿಗೆ ೧/೨ ಚಮಚ).

ಪಥ್ಯ: ಜಿಡ್ಡಿನ ಪದಾರ್ಥ ತಿನ್ನಬಾರದು.

ಜಾಂಡೀಸ್

ಬೇಕಾಗುವ ಸಾಮಾನು:ಒಂದು ಮುಷ್ಠಿ ನೆಲನಲ್ಲೂರಿ ಸೊಪ್ಪು, ಅವರೆಕಾಳು ಗಾತ್ರದ ಅರಿಶಿನ ಕೊನೆ.

ಮಾಡುವ ವಿಧಾನ: ಮೇಲೆ ತಿಳಿಸಿದ ವಸ್ತುಗಳನ್ನು ಬೀಜ ಸಹಿತ ನೀರು ಹಾಕದೆ ಅರೆಯುವುದು. ಗುಳಿಗೆ ಮಾಡಿ ದಿನಕ್ಕೆ ೨ ಬಾರಿ(ಬೆಳಿಗ್ಗೆ ಖಾಲಿ ಹೊಟ್ಟೆಗೆ ಮತ್ತು ರಾತ್ರಿ ಮಲಗುವಾಗ) ಸೇವಿಸುವುದು.

ಪಥ್ಯ: ಜಿಡ್ಡಿನ ಪದಾರ್ಥ ತಿನ್ನಬಾರದು. ಮಜ್ಜಿಗೆ, ಎಳನೀರು, ಕಬ್ಬಿನ ಹಾಲು ಸೇವಿಸುವುದು.

ಬಿಳಿಸೆರಗು

ಬೇಕಾಗುವ ಸಾಮಾನು: ಕಲ್ಲುನಾರು, ಕಲ್ಲು ಸಕ್ಕರೆ, ಶತಾವರಿ ಬೇರು (*Asparagus racemosus*).

ವಿಧಾನ: ೧೦ಗ್ರಾಂ ಕಲ್ಲುನಾರು, ಕಲ್ಲು ಸಕ್ಕರೆ ೧೦೦ಗ್ರಾಂ, ಶತಾವರಿ ಬೇರು ೩೦೦ ಗ್ರಾಂ ಹಾಕಿ ಜಜ್ಜಿ ರಸ ತೆಗೆದು ಕಲ್ಲುನಾರಿನ ಪುಡಿ, ಕಲ್ಲುಸಕ್ಕರೆ ಪುಡಿ ಬೆರೆಸಿ ಖಾಲಿ ಹೊಟ್ಟೆಗೆ ಕುಡಿಯುವುದು (೯ ದಿನ).

ಖಾರ ಕಡಿಮೆ ತಿನ್ನುವುದು ಕಾಫಿ, ಟೀ, ಕುಡಿಯುಬಾರದು.

ಮಾಹಿತಿ: ಭಾಗೀರಥಮ್ಮ.ಸಿ.ಬಿ., ಜಾವೂರು.

ಪಕ್ಷವಾತಕ್ಕೆ ರಾಮಬಾಣ

ಪಕ್ಷವಾತ ಮನುಷ್ಯನನ್ನು ಕಾಡುವ ಅನಿರೀಕ್ಷಿತ ಮಾರಿ. ಓಡಾಡುವ ಅಂಗಾಂಗಗಳು ಕ್ಷಣಮಾತ್ರದಲಿ ನಿಶ್ಚಲಗೊಳ್ಳುವ ಭಯಾನಕ ರೋಗ. ಇದಕ್ಕೆ ಈವರೆಗೂ ಯಶಸ್ವಿಯಾದ ಅಲೋಪತಿ ಔಷಧ ಕಂಡು ಬಂದಿಲ್ಲ. ಆದರೆ, ಉತ್ತರಕರ್ನಾಟಕದ ಬೆಳ್ಳಂಬಾರದ ಹಾಲಕ್ಕಿ ಗೌಡ ಜನಾಂಗದ ವೈದ್ಯರು, ಈ ರೋಗಕ್ಕೆ ನೀಡುವ ಔಷಧ ಇಂದು ದೇಶದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿಯೂ ತನ್ನ ಪ್ರಭಾವ ಬೀರಿದೆ. ಅಪಾರ ಬೇಡಿಕೆ ಪಡೆದುಕೊಂಡಿದೆ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯ ಒಂದು ಪುಟ್ಟ ಪ್ರದೇಶ ಬೆಳ್ಳಂಬಾರ. ಅಂಕೋಲೆಯ ತಾಲೂಕು ಕೇಂದ್ರದಿಂದ ಐದು ಕಿ.ಮೀ ಸಾಗಿದರೆ ಬೆಳಂಬಾರ ಸಿಗುತ್ತದೆ. ಬೆಳ್ಳಂಬಾರದಲ್ಲಿ ಸುಮಾರು ೨೦೦ ವರ್ಷಗಳಿಂದ ಪಕ್ಷವಾತಕ್ಕೆ ಔಷಧ ನೀಡುತ್ತಿರುವುದು ಬೊಮ್ಮು ಅವರ ಮನೆತನ. ಈ ಮನೆಯಲ್ಲಿ ಈಗ ಮೂರನೆಯ ತಲೆಮಾರು ವೈದ್ಯಕೀಯ ನಡೆಸುತ್ತಿದೆ. ಪ್ರಸಕ್ತ ಔಷಧಿ ನೀಡುತ್ತಿರುವ ೬೦ ವರ್ಷ ವಯಸ್ಸಿನ ಬೊಮ್ಮ ಗೌಡರು ಅಧಿಕೃತವಾಗಿ ಆಯುರ್ವೇದ ಮತ್ತು ಹೋಮಿಯೋಪತಿಯಲ್ಲಿ ಅಭ್ಯಾಸ ಮಾಡಿ ಸರ್ಟಿಫಿಕೇಟ್ ಪಡೆದುಕೊಂಡಿದ್ದು ಇವರ ಮನೆತನದ ಪರಂಪರೆಗೆ ಇದೊಂದು ಹೊಸ ದೃಷ್ಟಿಕೋನ ತಂದುಕೊಟ್ಟಿದೆ.

ಇಲ್ಲಿ ಹಣಕ್ಕಾಗಿ ಔಷಧಿ ಮಾರುತ್ತಿಲ್ಲ. 'ಅಪಾಯಿಂಟ್‌ಮೆಂಟ್', 'ಕನ್ಸಲ್ಟೇಶನ್ ಛಾರ್ಜು' ಯಾವುದೂ ಇಲ್ಲಿಲ್ಲ. ಆಸ್ಪತ್ರೆಯಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಇದೆ. ಆಸ್ಪತ್ರೆಯಲ್ಲಿ ರೂಮ್ ಬಾಡಿಗೆ, ಔಷಧ, ತೈಲ, ಮಸಾಜ್, ಸ್ನಾನ ಎಲ್ಲವೂ ಸೇರಿ ದಿನಕ್ಕೆ ೬೫ ರೂಪಾಯಿ. ಅರ್ಧಾಂಗ ವಾಯು (*Paralysis*), ಸಂಧಿವಾಯು, ಉರಿವಾಯು, ತೊದಲು ಮಾತಾಡುವಿಕೆ, ನಾಲಿಗೆ ಚಲಿಸದೇ ಮಾತು ಬಾರದಿರುವಿಕೆ, ತುಟಿವಿಕಾರ ಆಗುವಿಕೆ, ಕಣ್ಣುರೆಪ್ಪೆ ಚಲಿಸದೇ ಇರುವುದು, ಎಂಟು ವರ್ಷದ ಒಳಗಿನ ಮಕ್ಕಳಿಗೆ ಜ್ವರ ಬಂದು ತಗಲುವ ಪೋಲಿಯೋ ಇವುಗಳಿಗೆ ಬೆಳ್ಳಂಬಾರದ ಔಷಧಿ ರಾಮಬಾಣವಾಗಿ ಸಲ್ಲುತ್ತದೆ.

ಪಕ್ಷವಾತಕ್ಕೆ ಬಳಸಲ್ಪಡುವ ತೈಲ ಮತ್ತು ಔಷಧ ಸಹ್ಯಾದ್ರೀ ಬೆಟ್ಟದ ಕೆಲವು ಅಮೂಲ್ಯ ಗಿಡಮೂಲಿಕೆಗಳಿಂದ ತಯಾರಿಸಿದಂಥವುಗಳು. ಹೊನ್ನೆ ಕಾಯಿಯಿಂದ ತಯಾರಿಸಿದ ಎಣ್ಣೆಗೆ ಗಿಡಮೂಲಿಕೆಗಳನ್ನು ಅರೆದು ಸೇರಿಸಿ ತೈಲ ತಯಾರಿಸಲಾಗುತ್ತದೆ. ಹಲವು ಬಗೆಯ ಎಲೆಗಳಿಂದ, ಗಿಡಮೂಲಿಕೆಗಳಿಂದ ತಯಾರಿಸುತ್ತರೆ, ಆದರೆ, ಈ ಅಮೂಲ್ಯ ಗಿಡಮೂಲಿಕೆ, ಎಲೆಗಳ ಹೆಸರು, ಗುರುತು ಕೇಳಿದರೆ ಗೌಡರು ಯಾರಿಗೂ ಹೇಳುವುದಿಲ್ಲ. ಇದು ಹೇಳಬಾರದ ವಿಚಾರ ಎಂಬುದು ಅವರ ನಂಬುಗೆ. ಹೀಗೆ ತಲೆ ತಲಮಾರುಗಳಿಂದ ಗುರುತಿಸಿ ಉಳಿಸಿಕೊಂಡು ಬಂದಿರುವ ಔಷಧೀಯ ಸಸ್ಯಗಳಿಗೆ ತನ್ನದೆಂದು ಪೇಟೆಂಟ್ ಪಡೆದು, ಲಾಭ ಪಡೆಯುವ ಕಲ್ಪನೆಯೂ ಬರದ ಇಂಥ ನಮ್ರ ಸೇವಕರನ್ನು ಸಮಾಜ, ಸರಕಾರ ಗುರುತಿಸಿ ಗೌರವಿಸುವ ಅತ್ಯಗತ್ಯವಿದೆ.

ಮೂಲ ಲೇಖನ: ಬಿ.ಗಣಪತಿ

ಕೃಪೆ: ತರಂಗ, ೭ ಜುಲೈ ೧೯೯೬ .

ರಾಗಿ ಗಿಣ್ಣು

೧ ಕೆ.ಜಿ. ರಾಗಿಯನ್ನು ತೆಗೆದುಕೊಂಡು ದಪ್ಪವಾಗಿ ನುಚ್ಚನ್ನು ಮಾಡಿಸಿ ಅದನ್ನು ನೀರಿನಲ್ಲಿ ೨ ಗಂಟೆಗಳ ಕಾಲ ನೆನೆಹಾಕ ಬೇಕು ಇದು ನೆನದ ಮೇಲೆ ಅದನ್ನು ಚೆನ್ನಾಗಿ ಸಣ್ಣದಾಗುವ ಹಾಗೆ ರುಬ್ಬಬೇಕು ಅನಂತರ ಇದನ್ನು ಹಿಂಡಿ ರಸ ತೆಗದು ಕೊಂಡು ನಂತರ ಸೋಸುವುದು. ಈ ರಸ(ಹಾಲು) ಜೊತೆಗೆ ೧ ಲೀಟರ್ ನೀರು ಸೇರಿಸಿ ಚೆನ್ನಾಗಿ ಒಲೆಯ ಮೇಲೆ ಇರಿಸಿ ಕುದಿಸಬೇಕು. ಸ್ವಲ್ಪ ಕುದಿಸಿದ ನಂತರ ೧ಚಮಚ ಎಲಕ್ಕಿ ಪುಡಿ ೧/೨ಕೆ.ಜಿ. ಬೆಲ್ಲ ಅಥವಾ ಸಕ್ಕರೆ ಸೇರಿಸಿ ಚೆನ್ನಾಗಿ ಕುದಿಸಿ ತಟ್ಟೆಗೆ ಸುರಿದು (ಬಿಟ್ಟು) ಹಾರಿದ ನಂತರ ಚಾಕುವಿನಿಂದ ತುಂಡುಗಳನ್ನಾಗಿ ಕತ್ತರಿಸಿ ತಿನ್ನಬಹುದು. ಇದನ್ನು ಸೇವಿಸುವುದರಿಂದ ಶರೀರದ ಉಷ್ಣತೆ ಕಡಮೆಯಾಗುತ್ತದೆ. ದೇಹದ ಉಷ್ಣತೆ ಕಂಡು ಬಂದಾಗ ಇದನ್ನು ತಯಾರು ಮಾಡಿ ಸೇವಿಸಬಹುದು. ಇದು ಶರೀರಕ್ಕೆ ತಂಪನ್ನು ಕೊಡುತ್ತದೆ.

ಮಾಹಿತಿ: ರಾಜಣ್ಣ, ಹಾಸನ

ಗಿಣ್ಣು

ಬೇಕಾಗುವ ಸಾಮಾನು: ಕರು ಹಾಕಿದ ಒಂದು ದಿನದ ಹಸುವಿನ ಹಾಲು ೧ ಲೀಟರ್, ಯಾಲಕ್ಕಿ ೨, ೧/೨ ಕೆ.ಜಿ. ಅಕ್ಕಿ ೧/೨ ಕೆ.ಜಿ. ಬೆಲ್ಲ.

ಮಾಡುವ ವಿಧಾನ: ೧ ಲೀಟರ್ ಹಾಲಿಗೆ ೧ ಲೋಟ (ಚಿಕ್ಕ) ಗಿಣ್ಣು ಹಾಲನ್ನು ಹಾಕಿ ಕಲಕಬೇಕು. ೧/೪ ಕೆ.ಜಿ ಬೆಲ್ಲ ಚಿಕ್ಕದಾಗಿ ಪುಡಿ ಮಾಡಿ ಹಾಲಿನೊಳಕ್ಕೆ ಹಾಕಿ ಕಲಕಿ ಸೋಸಬೇಕು. ನಂತರ ಒಂದು ದೊಡ್ಡ ಪಾತ್ರೆಗೆ ನೀರು ಹಾಕಿ ಒಲೆಯ ಮೇಲಿಟ್ಟು, ಇನ್ನೊಂದು ಚಿಕ್ಕ ಪಾತ್ರೆಯ ಒಳಗೆ ಇಟ್ಟು ಬೇಯಿಸುವುದು (ಪಾತ್ರೆಯ ಮೇಲೆ ಪ್ಲೇಟ್‌ನಿಂದ ಭದ್ರವಾಗಿ ಮುಚ್ಚುವುದು). ೩೦ ನಿಮಿಷದ ನಂತರ ಗಿಣ್ಣು ರೆಡಿ.

ತೆಂಗಿನ ಕಾಯಿ ಗಿಣ್ಣು

ಬೇಕಾಗುವ ಸಾಮಾನು: ೧/೪ ಕೆ.ಜಿ. ಬಿಳಿ ಅಕ್ಕಿ ೨ ತೆಂಗಿನಕಾಯಿ, ಬೆಲ್ಲ ೧/೨ ಕೆ.ಜಿ., ಗಸಗಸೆ ೫೦ಗ್ರಾಂ, ಲವಂಗ ೫, ಯಾಲಕ್ಕಿ ೫.

ಮಾಡುವ ವಿಧಾನ: ಅಕ್ಕಿಯನ್ನು ಒಂದು ಗಂಟೆ ಕಾಲ ನೆನೆಹಾಕಿ ನಂತರ ತೆಂಗಿನ ಕಾಯಿ ತುರಿದು. ಅಕ್ಕಿ ಮತ್ತು ತೆಂಗಿನಕಾಯಿಯನ್ನು ಚೆನ್ನಾಗಿ ರುಬ್ಬುವುದು. ನಂತರ ೩ ಲೀಟರ್ ನೀರಿಗೆ ಬೆಲ್ಲವನ್ನು ಹಾಕಿ ಬೆಲ್ಲ ಕರಗುವ ತನಕ ಒಲೆಯ ಮೇಲಿಟ್ಟು. ನಂತರ ಸೋಸುವುದು. ಸೋಸಿದ ಬೆಲ್ಲದ ನೀರನ್ನು ಒಲೆಯ ಮೇಲಿಟ್ಟು ಚೆನ್ನಾಗಿ ಕುದಿದ ನಂತರ ರುಬ್ಬಿದ ಅಕ್ಕಿ ಮತ್ತು ಕಾಯಿಯನ್ನು ಇದರೊಳಗೆ ಹಾಕಿ ತಳ ಹಿಡಿಯದ ರೀತಿಯಲ್ಲಿ ಕಲಕುತ್ತಿರಬೇಕು. ನಂತರ ಪುಡಿ ಮಾಡಿಕೊಂಡು ಗಸಗಸೆ, ಲವಂಗ, ಯಾಲಕ್ಕಿಯನ್ನು ಇದರೊಳಗೆ ಹಾಕಿ ಕಲಕಬೇಕು. ಬೆಂದ ನಂತರ ಬೇರೊಂದು ಪಾತ್ರೆಗೆ ಹಾಕಿ ಮುಚ್ಚಿಡಬೇಕು.

ಮಾಹಿತಿ: ಬಿ.ಆರ್.ಈಶ್ವರಪ್ಪ, ಚಿತ್ರದುರ್ಗ ಜಿಲ್ಲೆ.

ಕೆಸುವಿನ ಪತ್ರೊಡೆ

ಬೇಕಾಗುವ ಸಾಮಗ್ರಿ: ಅರ್ಧ ಪಾವು ಬೆಳ್ತಿಗೆ ಅಕ್ಕಿ ಅರ್ಧ ಪಾವು ಹೆಸರು, ೧೫ ಹುರಿದ ಮೆಣಸು, ಹಿಂಗು ೨ ಚಿಟಿಕೆ, ಉಪ್ಪು, ಹುಳಿ ಅರ್ಧ ಲಿಂಬೆಹೋಳಿನಷ್ಟು, ಅರ್ಧ ಹೋಳು ತೆಂಗಿನಕಾಯಿ.

ಮಾಡುವ ವಿಧಾನ: ಅಕ್ಕಿ ಮತ್ತು ಹೆಸರನ್ನು ೨೦ ನಿಮಿಷ ನೆನೆಸಿ, ಬಳಿಕ ಮೆಣಸು ತೆಂಗಿನಕಾಯಿ ಸ್ವಲ್ಪ ರುಬ್ಬಿ ಅದಕ್ಕೆ ಅಕ್ಕಿ ಹೆಸರು, ಹಿಂಗು, ಹುಳಿ ಸೇರಿಸಿ ಚೆನ್ನಾಗಿ ರುಬ್ಬಿ, ಹಿಟ್ಟನ್ನು ಕೆಸುವಿನ ಎಲೆಗೆ ಸವರಿ ಸುರುಳಿ ಮಾಡಿ ಹಬೆಯಲ್ಲಿ ಬೇಯಿಸಿ, ಇದು ಊಟದೊಂದಿಗೆ ರುಚಿಯಾಗಿರುತ್ತದೆ. ಸುರುಳಿ ಸುತ್ತಲು ಆಗದಿದ್ದಲ್ಲಿ ಎಲೆಯನ್ನು ದೊಡ್ಡದಾಗಿ ಹೆಚ್ಚಿ ಹಿಟ್ಟಿನಲ್ಲಿ ಬೆರೆಸಿ ಕೆಸುವಿನ ಎಲೆಯಲ್ಲಿ ಸುತ್ತಿಡಿ. ಈ ಪತ್ರೋಡೆಯನ್ನು ಕಾವಲಿಯಲ್ಲಿಟ್ಟು ಎಣ್ಣೆ ಹಾಕಿ ಕಾಯಿಸಬಹುದು. ಇಲ್ಲವೇ ಪತ್ರೊಡೆಯನ್ನು ಹೆಚ್ಚಿಡಿ. ಬೆಳ್ಳುಳ್ಳಿಯನ್ನು ಸ್ವಲ್ಪ ಹೆಚ್ಚು ಎಣ್ಣೆ ಹಾಕಿ ಒಗ್ಗರಣೆ ಮಾಡಿ, ಅದಕ್ಕೆ ಹುಡಿ ಮಾಡಿದ ಪತ್ರೊಡೆ ಹಾಕಿ ಮಗುಚಿ ಬಳಿಕ ತೆಂಗಿನ ತುರಿ ಉದುರಿಸಿ ಪಲ್ಯದಂತೆ ಮಾಡಬಹುದು.

ಕೆಸುವಿನ ಸೊಪ್ಪಿನ ಚಟ್ನಿ

ಬೇಕಾಗುವ ಸಾಮಾಗ್ರಿ: ೭–೮ ಕೆಸುವಿನ ಸೊಪ್ಪು, ಹುಳಿ ನಿಂಬೆಯಷ್ಟು. ಉಪ್ಪು ರುಚಿಗೆ, ಒಣಮೆಣಸು ೧೨ ತೆಂಗಿನಕಾಯಿ–೧, ಬೆಳ್ಳುಳ್ಳಿ–೧ ಗಡ್ಡೆ, ಎಣ್ಣೆ ೪ ಟೀಸ್ಪೂನ್.

ವಿಧಾನ: ಕೆಸುವಿನ ಸೊಪ್ಪು, ಒಣಮೆಣಸು, ಹುಳಿ ಉಪ್ಪು ನೀರು ಹಾಕಿಬೇಯಿಸಿ. ನೀರು ಪೂರ್ತಿ ಆರಿದ ಮೇಲೆ ತೆಂಗಿನ ಕಾಯಿಯೊಂದಿಗೆ ಮೇಲಿನೆಲ್ಲಾ ಸಾಮಾನು ಸೇರಿಸಿ ಮಸಾಲೆ ರುಬ್ಬಿ ಎಣ್ಣೆ ಬಿಸಿಮಾಡಿ ಬೆಳ್ಳುಳ್ಳಿ ಜಜ್ಜಿ ಹಾಕಿ. ಕೆಂಪಗಾದ ಬಳಿಕ ರುಬ್ಬಿದ ಚಟ್ನಿ ಹಾಕಿ ಚೆನ್ನಾಗಿ ಮಗುಚಿ ನೀರಿನ ಪಸೆ ಇರಬಾರದು.

ಕೃಪೆ: ನಿಸರ್ಗದತ್ತ ಆಹಾರ,
ನಾಗರಿಕ ಸೇವಾ ಟ್ರಸ್ಟ್(ರಿ.), ಗುರುವಾಯನಕೆರೆ.

ಜೀವ ವೈವಿಧ್ಯತೆ

ನಮ್ಮ ದೇಶ ಸಸ್ಯ ಸಂಪತ್ತಿನ ದೃಷ್ಟಿಯಿಂದ ಹೇಳುವುದಾದರೆ, ಶ್ರೀಮಂತ ರಾಷ್ಟ್ರ. ಜಾಗತಿಕ ಮಟ್ಟದಲ್ಲಿ ನಮ್ಮದು ಸಸ್ಯ ಸಂಪತ್ತಿನ ಅಳತೆಗೋಲಿನಿಂದ ಹೇಳುವುದಾದರೆ ೧೦ನೇ ಸ್ಥಾನ ಪಡೆಯುತ್ತದೆ. ಇಲ್ಲಿ ಸುಮಾರು ೪೫೦೦೦ ಜಾತಿಯ ಸಸ್ಯಗಳಿವೆ. ಅದರಲ್ಲಿ ೧೫,೦೦೦ದಷ್ಟು ಜಾತಿ ಪ್ರಭೇದಗಳು ಮೇಲ್ವರ್ಗಕ್ಕೆ ಸೇರಿದ ಸಸ್ಯಗಳೇ, ಆಹಾರ ಸಸ್ಯಗಳೇ ಸುಮಾರು ೧೬೬ ಜಾತಿ ಪ್ರಭೇದಗಳು ಇವೆ. ಇಷ್ಟೆಲ್ಲಾ ಇದ್ದೂ ನಾವು ಬಡವರಾಗಲು ಸಾಧ್ಯವೇ? ಈ ಸಂಪತ್ತನ್ನು ನಮ್ಮ ಅಭಿವೃದ್ಧಿಗಾಗಿ ಬಳಸಿಕೊಳ್ಳಲು ಸಾಧ್ಯವಿಲ್ಲವೇ?

ಜಾಗತಿಕ ಮಟ್ಟದ ಮಾರುಕಟ್ಟೆ, ವ್ಯಾಪಾರ ವ್ಯವಹಾರ ನಿಯಂತ್ರಿಸುವ ವಿಶ್ವ ವಾಣಿಜ್ಯ ಸಂಸ್ಥೆಗೆ ನಾವು ಬದ್ಧರಾಗಿದ್ದೇವೆ. ಅರ್ಥಾತ್ ಅದು ಹೇಳುವ ಜೈವಿಕ ವಸ್ತುಗಳನ್ನು ಬೌದ್ಧಿಕ ಹಕ್ಕಿಗೆ ಒಳಪಡಿಸುವ ಹೇಳಿಕೆಗೆ ನಾವು ಒಪ್ಪಿದ್ದೇವೆ. ಅಷ್ಟೇ ಅಲ್ಲ, ಜಾಗತಿಕ ಮಟ್ಟದ ಇನ್ನೊಂದು ಒಪ್ಪಂದ ಜೀವ ವೈವಿಧ್ಯತೆಯ ಒಪ್ಪಂದ (ಸಿ.ಬಿ.ಡಿ) ಇದಕ್ಕೂ ನಾವು ಸಹಿ ಹಾಕಿದ್ದೇವೆ. ಈ ಒಪ್ಪಂದದಂತೆ ನಮ್ಮ ಎಲ್ಲ ಸಸ್ಯಸಂಪತ್ತಿಗೆ. ಅದರಲ್ಲಿನ ವೈವಿಧ್ಯತೆಗೆ ನಾವೇ ಒಡೆಯರು. ಆದರೆ, ಅದನ್ನು ರಕ್ಷಿಸುವುದು ನಮ್ಮ ಕರ್ತವ್ಯ, ಅಷ್ಟೇ ಅಲ್ಲ ಈ ಜೀವ ವೈವಿಧ್ಯತೆಯನ್ನು ಬೇರೆಯವರು ವಾಣಿಜ್ಯ ದೃಷ್ಟಿಯಿಂದ ಬಳಸುವ ಮೊದಲು ನಮ್ಮ ಅನುಮತಿ ಪಡೆದು ನಾವು ಹೇಳುವ ನಿಬಂಧನೆಗಳಿಗೆ ಒಪ್ಪಿಕೊಳ್ಳಬೇಕು. ಆದರೆ, ನಮ್ಮ ಸಂಪತ್ತು ಎಷ್ಟು ಎಂಬುದರ ಜ್ಞಾನ ನಮಗಿರಬೇಕಲ್ಲಾ?

ಜಾತಿ ಪ್ರಭೇದಗಳ ಸಸ್ಯ ವೈವಿಧ್ಯತೆ ಒಂದು ವಿಧವಾದರೆ, ಪ್ರತಿ ಜಾತಿ, ಪ್ರಭೇದಗಳೊಳಗಿನ ತಳಿ ವೈವಿಧ್ಯತೆಯೂ ಹಲವಾರು. ಅಂದರೆ, ಭತ್ತ, ಮೆಣಸಿನಕಾಯಿ ಇವು ಸಸ್ಯ ಪ್ರಭೇದಗಳು, ಭತ್ತದಲ್ಲಿ ಹಾಲುಬ್ಬಲು, ಬಸುಮತಿ ಹಾಗೆಯೇ ಮೆಣಸಿನಕಾಯಿಯಲ್ಲಿನ ಬ್ಯಾಡಗಿ, ಅಣ್ಣಿಗೇರಿ ಇವು ತಳಿ ವೈವಿಧ್ಯಗಳು. ಬ್ಯಾಡಗಿ, ಅಣ್ಣಿಗೇರಿಯಂತಹ ತಳಿ ವೈವಿಧ್ಯಗಳನ್ನು ಆರಿಸಿ, ಸಂರಕ್ಷಿಸಿರುವವರು ರೈತರು, ರೈತ ಸಮುದಾಯ. ಹಾಗಾಗಿ ಈ ಸಮುದಾಯಕ್ಕೆ ಅವುಗಳ ಮೇಲೆ ಅಧಿಕಾರವಿದೆ. ರೈತರ ಹಕ್ಕು ಎಂಬುದಕ್ಕೆ ಮನ್ನಣೆ ನೀಡಿ, ಅದನ್ನು ಎತ್ತಿ ಹಿಡಿದಿದೆ. ಸಿ.ಬಿ.ಡಿ. ಬೇವು, ಅರಿಶಿಣದಂಥ ಸಸ್ಯ ಪ್ರಭೇದಗಳು, ಬಸುಮತಿಯಂಥ ತಳಿ ವೈವಿಧ್ಯತೆಗಳನ್ನು ಅಮೇರಿಕಾ ಪೇಟೆಂಟ್‌ಗೆ ಒಳಪಡಿಸಿದ್ದು ಜಗಜ್ಜಾಹಿರಾತಾದ ವಿಷಯ. ಇಂತಹ ದುಸ್ಸಾಹಸಗಳನ್ನು ತಪ್ಪಿಸಬೇಕೆಂದರೆ ನಮ್ಮ ಸಂಪತ್ತಿನ ಪೂರ್ಣ ಮಾಹಿತಿ, ದಾಖಲಾತಿ ಇರಬೇಕು. ಅವುಗಳನ್ನು ಕಾಪಾಡಿ ಉಳಿಸಿಕೊಳ್ಳುವ ಪ್ರಯತ್ನವೂ ಬೇಕು. ಈ ಕೆಳಗಿನವು ಇಂತಹ ಕೆಲವು ಉಪಯುಕ್ತ ಸಂಗ್ರಹಗಳ ದಾಖಲಾತಿ.

ಬಿಳಿಗಿರಿ ರಂಗನ ಬೆಟ್ಟದ ಸೋಲಿಗರ ಕೃಷಿ ವೈವಿಧ್ಯತೆ.

–ಜಡೇಗೌಡ

ಬಿಳಿಗಿರಿರಂಗನ ಬೆಟ್ಟದಲ್ಲಿ ವಾಸವಾಗಿರುವ ಬುಡಕಟ್ಟು ಜನಾಂಗ ಸೋಲಿಗ ಜನಾಂಗ. ಇತ್ತೀಚಿನವರೆಗೆ ಅಂದರೆ ಸುಮಾರು ೧೯೭೩–೭೪ರವರೆಗೂ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತಾ ಕೃಷಿ ಜಾಗ ಬದಲಾಯಿಸುತ್ತಿದ್ದ ಈ ಜನಾಂಗ ಈಗ ಅಂದರೆ ೧೯೭೩–೭೪ರನಂತರ ಒಂದೇ ಜಾಗದಲ್ಲಿ ನೆಲೆಯಾಗಿ ನಿಂತು ಕೃಷಿ ಮಾಡುತ್ತಿದ್ದಾರೆ, ಇವರ ಬಳಿ ಇರುವ ಕೃಷಿಗೆ ಯೋಗ್ಯವಾದ ಬೆಳೆಗಳು ಹಲವಾರು. ಈ ಬೆಳೆಗಳಲ್ಲಿನ ತಳಿಗಳೂ ಹಲವಾರು. ಅಲ್ಲಿನ ಕೆಲವು ಬೆಳೆ ಮತ್ತು ತಳಿಗಳ ಪಟ್ಟಿ ಹೀಗಿದೆ:

ಆಹಾರ ಧಾನ್ಯಗಳು:

೧)ರಾಗಿ: ಸುಮಾರು ಏಳು ತಳಿಗಳಿವೆ. ಕಡ್ಡಿರಾಗಿ, ಮಜ್ಜಿಗೆ ರಾಗಿ, ದುರ್ಗದ ರಾಗಿ, ಹಾಲು ರಾಗಿ, ಬರಲು ರಾಗಿ, ಕರೆಕಡ್ಡಿ ರಾಗಿ, ಕರಿದುರ್ಗ ರಾಗಿ,

೨)ಮುಸುಕಿನ ಜೋಳ: ನಾಲ್ಕು ವಿಧಗಳು. ಕೊರೆಜೋಳ, ಸಣ್ಣಜೋಳ, ಹಾಲು ಜೋಳ, ದೊಡ್ಡಜೋಳ

ಬೇಳೆ ಕಾಳುಗಳು:

೧)ಅವರೆ: ದೊಡ್ಡ ಅವರೆ, ನೆಲ್ಲ ಅವರೆ, ಚಪ್ಪರದ ಅವರೆ, ಕತ್ತಿ ಅವರೆ, ಕರಿ ಅವರೆ, ಹಿತ್ತಿಲು ಅವರೆ, ದೊಡ್ಡಸೆಪ್ಪೆ, ಸಣ್ಣ ಸೆಪ್ಪೆ, ಹೀಗೆ ಅವರೆಯಲ್ಲಿ, ಅನೇಕ ಜಾತಿ.

೨) ತೊಗರಿ: ಇದರಲ್ಲೂ ಎರಡು ತಳಿಗಳಿವೆ. ದೊಡ್ಡತೊಗರಿ, ಮಾಲೆ ತೊಗರಿ

ಜೀವ ವೈವಿಧ್ಯತೆ

ತರಕಾರಿ ಬೆಳೆಗಳು:

೧) ಹರಿವೆ: ಮೂರು ಜಾತಿಯ ಹರಿವೆಗಳಿವೆ.

೨) ಕುಂಬಳ: ೪ ವಿಧಗಳು ಸಿಹಿಕುಂಬಳ, ಚಿಟ್ಟೆ ಕುಂಬಳ, ಬೇಗೆ ಕುಂಬಳ ಮತ್ತು ದೊಡ್ಡಕುಂಬಳ.

ಎಣ್ಣೆಬೀಜಗಳು:

೧)ಹರಳು: ಎರಡು ಜಾತಿಯ ತಳಿಗಳಿವೆ.

ಹಣ್ಣು ಹಂಪಲು:

೧)ಬಾಳೆ ಹಣ್ಣು: ಎಂಟು ಜಾತಿಯ ಬಾಳೆಗಳಿವೆ, ದುರ್ಗ, ಸಾಕಲತೆ, ಕಬ್ಬಾಳೆ, ಆನೆಬಾಳೆ, ಗುಜ್ಜ, ಪುಬ್ಬ, ಉದ್ದುರ, ಮದರಂಗ ಹೀಗೆ ಎಂಟು ವಿಧ.

೨)ಗೆಡ್ಡೆ ಗೆಣಸು: ತೋಟಂಬು, ತ್ರೈವಂಟಿಗೆ, ಸಶೀಲ, ಸಿಹಿಗೆಣಸು, ಮರಗೆಣಸು, ಸೆವೆ, ನೂರೆ, ಬೆಳ್ಳಾರೆ, ಸೋಲ, ಸೆಬ್ಬು ಹೀಗೆ ಹಲವಾರು ಜಾತಿಯ ಗೆಡ್ಡೆಗೆಣಸುಗಳಿವೆ.

ಪಶ್ಚಿಮ ಘಟ್ಟಗಳ ಪದವು ಪ್ರದೇಶದ ಒಂದು ಸಸ್ಯ ಸಂಗ್ರಹಾಲಯ:

ಪಶ್ಚಿಮ ಘಟ್ಟವೇ ಒಂದು ಸಸ್ಯ ಸಂಗ್ರಹಾಲಯ. ಇಂತಹ ನೈಸರ್ಗಿಕ ಸಸ್ಯ ಸಂಕುಲಗಳ ನಡುವೆ ಒಂದು ಮನೆ– ಪೈಲೂರು ಶ್ರೀನಿವಾಸರಾಯರದ್ದು, ಅಡಿಕೆ–ತೆಂಗಿನ ತೋಟ. ಮಧ್ಯೆ ಮಧ್ಯೆ ಬಾಳೆ, ಕೊಕ್ಕೊ, ಗೇರು, ಕಾಳು ಮೆಣಸು, ಜಾಯಿಕಾಯಿ ಉಪಬೆಳೆಗಳು. ಹೀಗೆ ತೋಟ, ತೋಟದಲ್ಲಿ ಅನೇಕ ಉಪಯುಕ್ತ ಬೆಳೆಗಳು ಬೇರೆ ಕಡೆಯೂ ಇದ್ದೀತು. ಆದರೆ, ಅದಕ್ಕಿಂತ ವಿಶಿಷ್ಟ ಎನ್ನಿಸಿದ್ದು ಅಚ್ಚುಕಟ್ಟಾದ ಹೂ ತೋಟ. ಆರ್ಕಿಡ್, ಕೇಪಳೆ, ದಾಸವಾಳ ಹೀಗೆ ಹೆಜ್ಜೆ ಹೆಜ್ಜೆಗೆ ಕಂಡು ಬಂದ ವಿವಿಧ ಬಗೆಯ ಹೂಗಿಡಗಳು. ಸ್ಥಳಿಯ ಸಸ್ಯಗಳ ಜೊತೆಗೆ ಹೊರಗಿನಿಂದ ತಂದು ಬೆಳೆಸಿದ ಆಗಂತುಕ ಗಿಡಗಳೂ ಅನೇಕ. ಇವೆಲ್ಲವುಗಳ ಜೊತೆಗೆ ಅಚ್ಚುಕಟ್ಟಾಗಿ ಬೆಳೆಸಿದ ಹುಲ್ಲುಹಾಸು ಅರ್ಥಾತ್ ಲಾನ್. ತೋಟ ಸುತ್ತುತ್ತಾ ನಡೆದಾಗ ಮನೆಗೆ ಬಂದ ಅತಿಥಿಗಳೊಬ್ಬರು ಶೀತ–ನೆಗಡಿಯಾಗಿದೆ, ಕಷಾಯವಿದ್ದರೆ ಬೇಕಿತ್ತು ಎಂದರು. ನನಗೂ ಸ್ವಲ್ಪ ಎಂದೆ. ಶ್ರೀನಿವಾಸರಾಯರ ಪತ್ನಿ ಶಾರದಾರವರು ತಂದುಕೊಟ್ಟಿದ್ದು ಕಹಿ ಕಷಾಯ. ಏನಿದು ಎಂದು ವಿಚಾರಿಸಿದಾಗ ಸಿಕ್ಕ ಉತ್ತರ ಕಿರಾತ ಕುಡಿ ಸಸ್ಯದ್ದು ಎಂದು. ಯಾವುದೆಂದು ಹೋಗಿ ನೋಡಿದಾಗ ಕಂಡದ್ದು ಹೂದೋಟದ ಅಂಚಿಗೆ ಚೆಂದಕ್ಕಾಗಿ ಬೆಳೆಸಿದ್ದ ಪುಟಾಣಿ ಗಿಡಗಳ ಸಾಲು. ಅಂದಕ್ಕಾಗಿ ಬೆಳೆಸಿದ ಸಸ್ಯ, ಔಷಧಿಯೂ ಹೌದು, ಹೀಗೆ ಎಷ್ಟೆಲ್ಲಾ ಗಿಡಗಳಿವೆ ನಿಮ್ಮಲ್ಲಿ ಎಂದು ಕೇಳಿದಾಗ ನೆನಪು ಮಾಡಿಕೊಂಡು ಕೊಟ್ಟ ಪಟ್ಟಿ ಕೆಳಗಿನದ್ದು.

ಔಷಧೀಯ ಗಿಡ ಮರಗಳು: ಅತ್ತಿ, ಅಶೋಕ, ಬಿಳಿಹೊಂಗೆ, ಏಲಕ್ಕಿ, ಕಹಿಬೇವು, ಕಂಚುಳಿ, ಲವಂಗ, ಇಂಗು, ಪುನರ್ಪುಳಿ, ಆರ್‌ಸ್ಪೈಸ್, ಕಾಫಿ, ಲಾವಂಚ, ಕಿರಾತಕಡ್ಡಿ, ಒಂದೆಲಗ, ಸರ್ಪಗಂಧಿ, ತುಳಸಿ, ಸಮುದ್ರಮಾಡಲ

ಅಡಿಗೆಗೆ ಆಗುವ ಗಿಡ ಮರಗಳು: ದೀವು ಕುಜ್ಜೆ, ಸಿಹಿ ಅಂಬಟೆ, ಎರಡು ಜಾತಿಯ ಪರಂಗಿ ಗಿಡಗಳು, ನುಗ್ಗೆ, ನರಗಳ, ವಿಟಮಿನ್ ಸೊಪ್ಪಿನ ಗಿಡ, ಕೊತ್ತಂಬರಿ ಸೊಪ್ಪು, ಗಂಧಸಾಲೆ ಸೊಪ್ಪು, ಶುಂಠಿ, ಅರಶಿನ, ಕರಂಡೆಕಾಯಿ, ಬಸಳೆ

ಹಣ್ಣು ಹಂಪಲು: ಮಾವು, ಹಲಸು, ಸಪೋಟ, ಬಾದಾಮಿ, ಹುಣಿಸೆ ಹಣ್ಣು, ಉಂಡೆಹುಳಿ, ಆಫ್ರಿಕನ್ ಎಪಲ್, ಚೆರ್ರಿ, ಪನ್ನೇರಳೆ, ಜಂಬುನೇರಳೆ, ಮೂರು ಜಾತಿಯ ಸ್ಟಾರ್ ಏಪಲ್. ಏಪಲ್, ನಿಂಬೆ, ರಂಬುಟಾನ್, ಅನನಾಸು, ೪ ಜಾತಿಯ ಸೀಬೆ, ರಾಜಾನೆಲ್ಲಿ, ಘಟ್ಟದನೆಲ್ಲಿ, ಪಾಮ್, ಲೀಚಿ, ಬೆಣ್ಣೆಹಣ್ಣು, ಸೀತಾಫಲ.

ಹೂಗಿಡ ಮರಗಳು: ಮೇ ಫ್ಲವರ್, ಗುಲ್ ಮೊಹರ್, ಭೂತಸಂಪಿಗೆ, ಕೆಂಡಸಂಪಿಗೆ, ಸಂಪಿಗೆ, ಪಾರಿಜಾತ, ಮಂದಾರ, ಕ್ರಿಸ್‌ಮಸ್ ಟ್ರೀ, ಬೋಬಳ್ ಖ್ರಿಪ್, ಮರಸೇವಂತಿಗೆ, ೩ ಜಾತಿಯ ಮುಸಂಡ, ಲಾಂಟನಾ, ೬ ಜಾತಿಯ ಕೇಪಳೆ, ೩೫ ಜಾತಿಯ ದಾಸವಾಳ, ೪೦ ತರದ ಕೋಟನ್, ಬೆಲ್ ಫ್ಲವರ್, ಹೆಲಿಕೋರ್ನಿಯೊ, ಗೊರಟೆ, ಕನಕಾಂಬರ, ಸದಾಮಲಿಗೆ, ಆರ್ಕಿಡ್ಸ್, ಕಳ್ಳಿಗಿಡಗಳು ಅನೇಕ ರೀತಿಯ ಬಳ್ಳಿಗಳು.

ಉತರ ಕರ್ನಾಟಕದ ಕೆಲ ನಾಟೀ ತಳಿಗಳು:

ಕೆಂಪು ಕಣಕದ ಜೋಳ: ಈ ತಳಿ ಕೆಂಪು ಬಣ್ಣದ ಕಾಳು ಹೊಂದಿದ್ದು ಹಿಟ್ಟು ಗೋಧಿ ಹಿಟ್ಟಿನಂತೆ ಜಿಗುಟಾಗಿರುತ್ತದೆ.

ಬಿಳಿ ಕಣಕದ ಜೋಳ: ಈ ತಳಿಯ ಕಾಳು ಬಿಳಿ ಬಣ್ಣದಿಂದ ಕೂಡಿದ್ದು ಇದರ ಹಿಟ್ಟನ್ನು ಕಡುಬಿಗೆ ಉಪಯೋಗಿಸುತ್ತಾರೆ.

ಜವಾರಿ ಹೆಸರು: ಮುಂಗಾರಿನಲ್ಲಿ ಬಿತ್ತುವ ಹೆಸರಿಗೆ 'ಕರಿಹೆಸರು' ಎನ್ನುತಾರೆ. ಇದು ತೊಗರಿಯ ಮಿಶ್ರ ಬೆಳೆ. ಹಿಂಗಾರಿನಲ್ಲಿ ಬಿತ್ತುವ ಹೆಸರಿಗೆ ಗಡ್ಡಿ ಹೆಸರು ಅಥವಾ ಮರಿ ಹೆಸರೆಂದು ಕರೆಯುತ್ತಾರೆ.

ಮೂಲ: ಚನ್ನ ಬಸವರಡ್ಡಿ, ಪೈರು– ಪಚ್ಚೆ ಸ.೧ ಸಂ.೨೯೯

ಕಣ್ಮರೆಯಾಗುತ್ತಿರುವ ಹಿತ್ತಲಗಿಡಗಳು

ಬೆತ್ತದ ಕಲೆ

ಮಲೆನಾಡಿನ ಕೆಲ ಕುಶಲಕರ್ಮಿಗಳು ತಯಾರಿಸುತ್ತಿದ್ದ ಬೆತ್ತದ ಸಾಮಗ್ರಿಗಳು ಈಗ ಮಾಯವಾಗುತ್ತಿವೆ. ಬೆತ್ತದ ಸಾಮಗ್ರಿ ತಯಾರಿಸಲು ಬೆತ್ತವೇ ಸಿಗುತ್ತಿಲ್ಲ ಎಂಬುದು ಅವರ ಕೂಗು. ಉತ್ತರ ಕನ್ನಡದ ಯಲ್ಲಾಪುರ ತಾಲ್ಲೂಕಿನ ದಟ್ಟ ಅರಣ್ಯ ಪ್ರದೇಶದಲ್ಲಿ ಆದಿವಾಸಿಗಳಂತೆ ಬದುಕುತ್ತಿದ್ದ ಸಿದ್ಧಿಗಳು ಬೆತ್ತವನ್ನೇ ಜೀವಾಳ ಮಾಡಿಕೊಂಡಿದ್ದರು. ಪೆಟ್ಟಿಗೆ, ಬುಟ್ಟಿ, ತೊಟ್ಟಿಲು, ಹೂ ದಾನಿ, ಹೀಗೆ ನಾನಾ ವಿಧದ ಸಾಮಾನುಗಳು ಸಿದ್ಧವಾಗುತ್ತಿದ್ದವು. ಈಗ ಸ್ಟೀಲ್‌ನ ಹೂದಾನಿ, ಪ್ಲಾಸ್ಟಿಕ್ ತೊಟ್ಟಿಲು ಮುಂತಾದ ರೆಡಿಮೇಡ್ ವಸ್ತುಗಳು ಸಿಗುತ್ತಿರುವಾಗ ಬೆತ್ತದ ಸಾಮಾಗ್ರಿಗಳನ್ನು ಯಾರೂ ಒಪ್ಪುವುದಿಲ್ಲ. ಜೊತೆಗೆ ಅರಣ್ಯಗಳ್ಳರ ಕಾಟದಲ್ಲಿ ಬೆತ್ತವೂ ಮಾಯವಾಗುತ್ತಿದೆ.

ಮೂಲ: ಸಂಧ್ಯಾ ಮಂಜುನಾಥ್

ಕೃಪೆ: ಪ್ರಜಾವಾಣಿ, ೬/೧೧/೯೯

ನಾಡ ಹೆಂಚು

ಇತ್ತೀಚಿನ ದಿನಗಳಲ್ಲಿ ನಾಡಹೆಂಚಿನ ಉತ್ಪಾದನೆ ಅತ್ಯಲ್ಪ ಪ್ರಮಾಣದಲ್ಲಿ ಸಾಗಿದೆ. ಹೊಸಬರು ಕೂಡಾ ಈ ಉತ್ಪಾದನಾ ಚಟುವಟಿಕೆಗೆ ಪ್ರವೇಶಿಸುತ್ತಿಲ್ಲ. ಹೆಂಚು ತಯಾರಿಸಿಕೊಡುವುದು ಸಾಮಾನ್ಯವಾಗಿ ಕುಂಬಾರರ ಕಾಯಕ. ಮೈಸೂರು ಸೀಮೆ ಹಾಗೂ ಸುತ್ತಮುತ್ತಲ ಪ್ರದೇಶದ ಮನೆಗಳು ಹೆಚ್ಚಾಗಿ ಬಳಸುತ್ತಿದ್ದುದು ಈ ಮೊದಲಿನ ವರ್ಷಗಳಲ್ಲಿ ನಾಡ ಹೆಂಚುಗಳನ್ನೇ. ಆದ್ದರಿಂದ ಈ ವಿಧದ ಹೆಂಚುಗಳಿಗೆ ವಿಪರೀತ ಬೇಡಿಕೆ ಇರುತ್ತಿತ್ತು. ಸಿದ್ಧ ಮಾಡುವವರಿಗೆ ಕೈ ತುಂಬಾ ಹಣವೂ ಸಿಗುತ್ತಿತ್ತು. ಆದರೆ ಸೀಮೆ ಹಂಚುಗಳು ಹೊದಿಸಲು ಹಾಗೂ ನೋಡಲು ನಾಜೂಕಾಗಿವೆ ಎಂಬ ಕಾರಣದಿಂದ ಬೇಡಿಕೆ ಹೆಚ್ಚಿಸಿಕೊಂಡವು. ಜೊತೆಗೆ ಅವು ದೂರದ ಊರುಗಳಿಂದ ಸರಬರಾಜಾಗತೊಡಗಿ ಸ್ಥಳೀಯ ಕುಂಬಾರಿಕೆಗೆ ಆತಂಕ ಒದಗಿತು. ನಾಡ ಹೆಂಚುಗಳಿಗೆ ಬೇಡಿಕೆ ಕಡಿಮೆಯಾಗಲು ಪ್ರಮುಖ ಕಾರಣ ಮೈಸೂರು ವಲಯದಲ್ಲಿ ಹಾಗೂ ಇನ್ನಿತರೆಡೆ ಈ ಮೊದಲಿನ ಸಾಂಪ್ರದಾಯಿಕ ಶೈಲಿಯ ಮನೆಗಳ ನಿರ್ಮಾಣ ನಿಂತು ಹೋದುದು.

ಮೂಲ: ಎಂ.ಟಿ.ಮಹಾದೇವ್,

ಕೃಪೆ: ಪ್ರಜಾವಾಣಿ, ೨೬/೧/೯೯

ಹಿತ್ತಲಗಿಡದ ವ್ಯಕ್ತಿ

ಇತಿಹಾಸ ಸೇರಿದ ಸೊಣ್ಣಹಳ್ಳಿಪುರದ ದೊಡ್ಡಮುನಿಬೈರಪ್ಪ

ತನಗೆ, ಮಕ್ಕಳಿಗೆ ಕೊನೆಗೆ ಮರಿಮಕ್ಕಳವರೆಗೆ ಸಾಕಾಗುವಷ್ಟು ಆಸ್ತಿ ಮಾಡಿ, ತೋಟ ಮಾಡಿ ಬದುಕುವ ಜನ ಹಲವಾರು ಸಿಕ್ಕಿಯಾರು ಆದರೆ, ದನಕರುಗಳಿಗೆ ಮೇವು ಒದಗಿಸುವುದಕ್ಕಾಗಿ, ಗ್ರಾಮದ ಜನಕ್ಕೆ ಹಣ್ಣು-ಹಂಪಲು ದೊರಕಿಸುವುದಕ್ಕಾಗಿ ಗಿಡ ನೆಟ್ಟು ಕಾಪಾಡುವ ಜನ ಅದೆಷ್ಟು ಸಿಕ್ಕಿಯಾರು? ಈ ರೀತಿಯ ಅಪರೂಪದ ವ್ಯಕ್ತಿ ಸೊಣ್ಣ ಹಳ್ಳಿಪುರದ ದೊಡ್ಡ ಮುನಿವೈರಪ್ಪ. ೧೯೪೮ರಲ್ಲಿ ಊರಿನಲ್ಲಿದ್ದ ಐದು ಎಕರೆ ಗೋಮಾಳದ ಪಕ್ಕದ ೨.೩೦ಎಕರೆ ಭೂಮಿಯನ್ನು ಹಳೆಯ ಮೈಸೂರು ಸರ್ಕಾರದಿಂದ ಪಡೆದು ಊರಿನ ಜನರ ಅನುಕೂಲಕಾಗಿ ಅಭಿವೃದ್ಧಿ ಪಡಿಸಿದರು.

ಅಲ್ಲಿ ಅವರು ನೆಟ್ಟಿದ್ದು ಸುಮಾರು ೧೮೨ ಗಿಡಗಳು. ಇವೆಲ್ಲಾ ಒಂದೇ ಜಾತಿಯಲ್ಲ. ಬೇರೆ ಬೇರೆಯವು. ಫಲನೀಡುವ ಹಲಸು, ನೇರಳೆ, ಕೆಂಪು ನೇರಳೆ, ಮಾವು, ಹುಣಸೆ ಜೊತೆಗೆ ತಂಪು ನೀಡುವ ದನಕರುಗಳಿಗೆ ಮೇವು ನೀಡುವ ಹೊಂಗೆ, ಅರಳಿ, ಬೇವು, ಬನ್ನಿ, ಬಿಲ್ವಪತ್ರೆ, ಶ್ರೀಗಂಧ ಹೀಗೆ ಹತ್ತು ಹಲವಾರು ಜಾತಿ. ಹೀಗೆ ಗಿಡನೆಟ್ಟು ಸುಮಾರು ಐದು ವರ್ಷಗಳ ಕಾಲ ಸ್ವತಃ ನೀರು ಹೊತ್ತು ತಂದು ಗಿಡಗಳಿಗೆ ಎರೆದು ದೊಡ್ಡವು ಮಾಡಿದರು.

ರಸ್ತೆ ಬದಿಯಲ್ಲಿ ಮರ ನೆಟ್ಟು ಸಾಲು ಮರದ ತಿಮ್ಮಕ್ಕನೆಂದು ಹೆಸರು ಪಡೆದ ಮಾಗಡಿ ತಾಲ್ಲೂಕಿನ ತಿಮ್ಮಕ್ಕನಂತೆ; ಪರರಿಗಾಗಿ ಮರ ಬೆಳೆಸಿದ ಹೊಸಕೋಟೆ ತಾಲ್ಲೂಕಿನ ವ್ಯಕ್ತಿ ಸೊಣ್ಣ ಹಳ್ಳಿ ಪುರದ ದೊಡ್ಡಮುನಿಬೈರಪ್ಪ ಕೃಷಿ ವಿಶ್ವವಿದ್ಯಾನಿಲಯದ ಕೃಷಿ ವಿಸ್ತರಣ ವಿಭಾಗದ ಸಹಾಯಕ ಅಧ್ಯಾಪಕರಾದ ಕೆ.ನಾರಾಯಣಗೌಡ, ದೊಡ್ಡ ಮುನಿಬೈರಪ್ಪನವರ ಈ ನಿಸ್ವಾರ್ಥ ಸೇವೆಯನ್ನು ಬೆಳಕಿಗೆ ತಂದಿದ್ದಾರೆ.

ಕೃಪೆ: ಪ್ರಜಾವಾಣಿ, ೧೬ ನವೆಂಬರ್ ೧೯೯೯

ಉಳಿಸಿ, ಬೆಳೆಸಬೇಕಾದ ಹಿತ್ತಲಗಿಡಗಳು

೧) ನಂಜನಗೂಡಿನ ರಸಬಾಳೆ

ನಂಜನಗೂಡಿನ ರಸಬಾಳೆ ಹಣ್ಣು ದೇಶದ ಎಲ್ಲಾ ಕಡೆ ಪ್ರಖ್ಯಾತವಾಗಿದೆ. ಇಲ್ಲಿನ ಮಣ್ಣೂ ಹಣ್ಣಿನ ಉತ್ಕೃಷ್ಟತೆಗೆ ಮತ್ತು ಇಳುವರಿಗೆ ಯೋಗ್ಯವಾಗಿದೆ. ಬೇರೆ ಯಾವುದೇ ಪ್ರದೇಶದ ರಸಬಾಳೆ ಹಣ್ಣು ಇಷ್ಟು ರುಚಿಯಾಗಿರುವುದಿಲ್ಲ ಎಂದು ನಂಜನಗೂಡಿನ ತೋಟಗಾರಿಕೆ ಇಲಾಖೆಯ ಸಹನಿರ್ದೇಶಕ ಕೆ.ಸುರೇಶ್ ವಿವರಿಸುತ್ತಾರೆ, ಆದರೆ ಇದಕ್ಕೆ ತಗಲುತ್ತಿರುವ ಪನಾಮ ರೋಗಕ್ಕೆ ಹೆದರಿ ರೈತರು ಕಂಗಾಲಾಗಿದ್ದಾರೆ. ರಸಬಾಳೆಯೂ ಕಣ್ಮರೆಯಾಗುತ್ತಿದೆ. ಹತ್ತು ವರ್ಷಗಳ ಹಿಂದೆ ನಂಜನಗೂಡು ಸುತ್ತಮುತ್ತ ಪ್ರದೇಶದಲ್ಲಿ ಸುಮಾರು ಆರು ಸಾವಿರ ಎಕರೆ ಪ್ರದೇಶದಲ್ಲಿ ರಸಬಾಳೆ ಹಣ್ಣನ್ನು ಬೆಳೆಯಲಾಗುತ್ತಿತ್ತು. ಈಗ ಬರೀ ಮುನ್ನೂರು ಎಕರೆ ಪ್ರದೇಶದಲ್ಲಿ ಈ ಬೆಳೆ ಬರುತ್ತಿದೆ. ನಂಜನಗೂಡಿನ ಖ್ಯಾತಿಯನ್ನು ನಾಡಿನ ತುಂಬಾ ಹರಡಿದ ಈ ರಸಬಾಳೆಯ ತಳಿ ಉಳಿಯಬೇಕು.

ಮೂಲ: ಎ.ಆರ್.ರಾಧಾಕೃಷ್ಣ.
ಕೃಪೆ: ಪ್ರಜಾವಾಣಿ.೧೦/೨/೯೯

೨)ಅಣ್ಣಿಗೇರಿಯ ಮೆಣಸಿನಕಾಯಿ

ಧಾರವಾಡ ಜಿಲ್ಲೆ ಅಣ್ಣಿಗೇರಿಯಲ್ಲಿಯ ಕಡ್ಡಿ ಮೆಣಸಿನಕಾಯಿ ಅಣ್ಣಿಗೇರಿ ಡಿಲಕ್ಸ್ ಎಂದೇ ಪ್ರಖ್ಯಾತ. ಇದು ನಿಜವಾಗಿಯೂ ಖಾರದ ಮೆಣಸಿನಕಾಯಿ. ಇದು ದೀರ್ಘ ಕಾಲದವರೆಗೆ ಕೆಡುವುದಿಲ್ಲ. ಒಳ್ಳೆಯ ಕೆಂಪು ಬಣ್ಣ ಬೀಜ ಸಿಡಿಯದೇ ಇರುವುದು ಈ ಮೆಣಸಿನಕಾಯಿಯ ವೈಶಿಷ್ಟ್ಯ. ಇದರ ಬೀಜೋತ್ಪಾದನೆಯನ್ನು ಸ್ಥಳಿಯ ರೈತರೇ ಮಾಡಿಕೊಳ್ಳುತ್ತಾರೆ. ಕರ್ನಾಟಕದ ಬಳ್ಳಾರಿಯಲ್ಲಿ ಹೆಚ್ಚು ಮೆಣಸಿನಕಾಯಿ ಬೆಳೆ ಬೆಳೆಯಾಲಾಗುತ್ತಿದೆ. ಬಳ್ಳಾರಿ ಬಿಟ್ಟರೆ ರಾಜ್ಯದಲ್ಲೇ ಅತಿ ಹೆಚ್ಚಿನ ಮೆಣಸಿನಕಾಯಿ ಬೆಳೆಯುವ ಪ್ರದೇಶ ಅಣ್ಣಿಗೇರಿಯಾಗಿದೆ. ಫಲವತ್ತಾದ ಆಳವಾದ ಎರೆಮಣ್ಣು ಮತ್ತು ಅತ್ಯುತ್ತಮ ಹವಾಮಾನ ಉತ್ತಮ ಗುಣಮಟ್ಟದ ಮೆಣಸಿನಕಾಯಿ ಬೆಳೆ ಬರಲು ಕಾರಣ.

ಮೂಲ: ವಿರೇಶ ರಾಮಭೋಗರ
ಕೃಪೆ: ಪ್ರಜಾವಾಣಿ, ೩/೨/೯೯

೩)ಬ್ಯಾಡಗಿ ಮೆಣಸು

ಹಾವೇರಿ, ಧಾರವಾಡ, ಗದಗ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳಲ್ಲಿ ಬೆಳೆಸುವ ಬ್ಯಾಡಗಿ ಮೆಣಸು ಅತೀ ಪ್ರಸಿದ್ಧ. ಬ್ಯಾಡಗಿ ಕಡ್ಡಿ ಮೆಣಸಿನಕಾಯಿಯ ಕೆಂಪು ಬಣ್ಣ, ವಿಶಿಷ್ಟ ರುಚಿ, ಗುಣಧರ್ಮಗಳಿಂದಾಗಿ ಇದು ಪ್ರಸಿದ್ಧ. ಮೆಣಸಿನಕಾಯಿಯಲ್ಲಿನ ಬೀಜ ತೆಗೆದು ಕೇವಲ ಮೆಣಸಿನಕಾಯಿಯ ತೊಗಟೆಯಿಂದ ಬಣ್ಣ ತೆಗೆಯುತ್ತಾರೆ. ಈ ರೀತಿ ತೆಗೆದ ಬಣ್ಣಕ್ಕೆ ಒಲಿಯೋರಸಿನ್ ಎಂದು ಕರೆಯುತ್ತಿದ್ದು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿಯೂ ಇದಕ್ಕೆ ಉತ್ತಮ ಬೇಡಿಕೆ ಇದೆ.

ಮೂಲ: ಮಾಲತೇಶ ಬಿ.ಅರಳಿಮಟ್ಟಿ.
ಕೃಪೆ: ಪ್ರಜಾವಾಣಿ, ೩/೨/೯೯

೪)ಗುಡ್ಡೆಗೇರು

ಮಲೆನಾಡಿನ ಕಾಡುಗಳಲ್ಲಿ ಕಂಡುಬರುವ ಈ ಮರ ಗೋಡಂಬಿ ಕೊಡುವ ಗೇರು ಮರ ಅಲ್ಲ. ಕಾಡುಗೇರು ಎಂದು ಕರೆಯಲ್ಪಡುವ ಮಲೆನಾಡಿನ ಅರಣ್ಯದಲ್ಲಿ ಬೆಳೆಯುವ ಈ ಮರ ೪೦ರಿಂದ ೫೦ ಅಡಿ ಎತ್ತರ ಬೆಳೆಯುತ್ತದೆ. ಮಳೆಗಾಲದ ಕೊನೆಯಲ್ಲಿ ಹೂ ಬಿಟ್ಟು ಹಣ್ಣು ಕೊಡುತ್ತವೆ ಹಣ್ಣುಗಳನ್ನು ಬಿಸಿಲಲ್ಲಿ ಒಣಗಿಸಿ ನಂತರ ಬೆಲ್ಲದಲ್ಲಿ ಹಾಕಿಟ್ಟು ತಿನ್ನಲು ಬಳಸುತಾರೆ. ತಿನ್ನುವುದಕ್ಕೆ ಮಾತ್ರವಲ್ಲ; ಆಯುರ್ವೇದ ಔಷಧಿಯಲ್ಲೂ ಗುಡ್ಡೆಗೇರು ಬಳಕೆಯಾಗುತ್ತಿದೆ. ಈ ಗೇರಿನ ಬೀಜದ ಎಣ್ಣೆಯನ್ನು ಕಾಡಾನೆಯನ್ನು ಪಳಗಿಸಲು ಬಳಸುತ್ತಾರಂತೆ. ಹಣ್ಣಿನ ರಸವನ್ನು ನಿಂಬೆಯ ನೀರಿಗೆ ಬೆರೆಸಿ ದೋಬಿಗಳು ಹತ್ತಿ ಮತ್ತು ಲಿನನ್ ಬಟ್ಟೆಗಳ ಮೇಲೆ ಗುರುತಿನ ಗೆರೆ ಹಾಕಲು ಬಳಸುತ್ತಾರೆ. ಜಾನುವಾರುಗಳ ಕಾಲಿನ ಮುಳ್ಳು ತೆಗೆಯಲು, ಮನುಷ್ಯರ ಕಾಲಿನ ಪಾದಗಳ ಬಿರುಕಿಗೆ, ನಂಜಿನ ಗಾಯಗಳಿಗೆ ಹಚ್ಚಿ ಗುಣ ಮಾಡಲು ಬಳಸುತ್ತಾರೆ. ಮರದ ಅಂಟನ್ನು ಒಡೆದ ಪಾತ್ರೆಗಳನ್ನು ಜೋಡಿಸಲು ಬಳಸುತ್ತಾರೆ. ಇಷ್ಟೊಂದು ಉಪಯೋಗದ ಈ ಮರ ಇಂದು ಅಪರೂಪವಾಗುತ್ತಿದೆ. ಕೃತಕ ಅರಣ್ಯ ಬೆಳೆಸುವಾಗ ಇಂತಹ ಸ್ಥಳೀಯ ಉಪಯುಕ್ತ ಸಸ್ಯಗಳಿಗೆ ಅರಣ್ಯ ಇಲಾಖೆ ಗಮನ ಕೊಡುವುದು ಅತಿ ಅಗತ್ಯ.

ಮೂಲ: ರಿಪ್ಪನ್‌ಪೇಟೆ ನಾಗಭೂಷಣ ಹೆಗಡೆ
ಕೃಪೆ: ಪ್ರಜಾವಾಣಿ, ೩-೧೧-೧೯೯೯

ಸಂವಾದ – ಶ್ರೀ ಪಡ್ರೆ ಮತ್ತು ಪ್ರಕಾಶ್ ಕಮ್ಮರಡಿ

ಪ್ರಿಯರೇ,

ಹಿತ್ತಲಗಿಡ ಮೇ-ಆಗಸ್ಟ್ ೯೯ ಸಂಚಿಕೆಯ ಸಂಪಾದಕೀಯ ಓದಿದೆ. ಚೆನ್ನಾಗಿದೆ. ಆದರೆ ನರ್ಮದಾ ಬಚಾವೋ ಆಂದೋಲನದ ಬಗ್ಗೆ ಪ್ರಸ್ತಾಪಿಸುತ್ತಾ ಅಲ್ಲಿನ ರೈತರನ್ನು ಅಲ್ಲಲ್ಲಿ ನೀರು ತಡೆದು ಇಂಗಿಸುವತ್ತ ಪ್ರೇರೇಪಿಸಬೇಕಿತ್ತು; ಆದಿವಾಸಿಗಳಿಗೆ ಮೂಲಭೂತ ಸೌಕರ್ಯ ಪೂರೈಸಿ ಜೀವನಮಟ್ಟ ಏರಿಸುವ ಕೆಲಸ ಆಂದೋಲನ ಹಮ್ಮಿಕೊಂಡವರು ಮಾಡಬೇಕಿತ್ತು ಅಂತ ಸೂಚಿಸಿದ್ದೀರಿ. ಇವೆಲ್ಲ ಅಲ್ಲಿನ ಜನರ ಜೀವಸೊತ್ತು ಉಳಿದ ನಂತರದ ವಿಷಯಗಳು ತಾನೇ. ಎತ್ತರ ಏರಿಸಿಕೊಳ್ಳುವ ಅಣೆಕಟ್ಟು ಅವರ ಬದುಕಿನೆದುರೇ ಭೂತಾಕಾರ ಪ್ರಶ್ನೆ ಹಾಕಿರುವಾಗ, ಸಾವಧಾನದಲ್ಲಿ ಆಗಬೇಕಾದ ಈ ಕೆಲಸಗಳಿಗೆ ಎಡೆ ಎಲ್ಲಿ?

ನರ್ಮದಾ ಕಣಿವೆ ಸಂತ್ರಸ್ತರಿಗೆ ಅರುಂಧತಿ ರಾಯ್ 'ಹೊರಗಿನವರು.' ಎಂಬ ನಿಮ್ಮ ವಾದದ ಅದೇ ಮಾನದಂಡ ತೆಗೆದುಕೊಂಡರೆ ಬಡವರ, ದೀನದಲಿತರ ಕಲ್ಯಾಣದ ಬಗ್ಗೆ 'ಭಾರೀ' ಕಳಕಳಿ ತೋರಿಸುವ ನಮ್ಮ ಕೃಷಿಕರಿಗೆ-ಹಳ್ಳಿಗರಿಗೆಂದು ಪತ್ರಿಕೆ ಪ್ರಕಟಿಸುವವರು ಅನುಕಂಪ ತೋರುವ ಜನಪ್ರತಿನಿದಿಗಳು ಎಲ್ಲರೂ 'ಹೊರಗಿನವರೇ' ಅಲ್ಲವೇ?.

ಶ್ರೀ ಪಡ್ರೆ

ಪ್ರೀತಿಯ ಪಡ್ರೆಯವರೆ,

ತಮ್ಮ ಪತ್ರ(೨೭/೯/೯೯) ಕೈಸೇರಿದೆ, ನೀವು ಪತ್ರದಲ್ಲಿ ಎತ್ತಿರುವ ವಿಚಾರದಲ್ಲಿ ಎರಡನ್ನು ಇಲ್ಲಿ ಪ್ರಸ್ತಾಪಿಸಲಿರುವೆನು.

ನರ್ಮದಾ ಕಣಿವೆಯ ಆ ಎಲ್ಲಾ ಬೃಹತ್ ನೀರಾವರಿ ಯೋಜನೆಗಳಿಗೆ ಗುಜರಾತಿನಾದ್ಯಂತ ಜನರ ಬೆಂಬಲವಿದೆ. ಹಾಗೇ, ಯಾವುದೇ ರಾಜಕೀಯ ಪಕ್ಷ ಇದನ್ನು ಬೆಂಬಲಿಸದೆ, ಓಟು ಪಡೆಯುವುದು ಅಸಾಧ್ಯ. ಅಂದ ಮೇಲೆ, ಒಂದು ಜನಪರ ಚಳುವಳಿ ಆ ಪ್ರದೇಶದ ಬಹುಸಂಖ್ಯಾತರ ಸಮ್ಮತಿ ಪಡೆದಿಲ್ಲ ಎಂದ ಮೇಲೆ ಆ ಚಳುವಳಿಯೇ ಸೀಮಿತ ವ್ಯಾಪ್ತಿ ಹೊಂದಿದೆಯೇ ಎಂಬ ಅನುಮಾನವೇಳುತ್ತದೆ. ಈ ಪ್ರಶ್ನೆಯನ್ನು ಕಳೆದ ತೃತೀಯ ಭಾರತೀಯ ವಿಜ್ಞಾನ ಸಮ್ಮೇಳನ-ವಾರಣಾಸಿಯಲ್ಲಿ, ಮೇಧಾಪಾಟ್ಕರ್‌ನ್ನೇ ಕೇಳಿದಾಗ, ಸರ್ಕಾರ ಈ ರೀತಿಯ ದ್ವಂದ್ವಗಳನ್ನು ಹುಟ್ಟು ಹಾಕುತ್ತಲಿದೆ ಎಂದರು. ಇದು ಸತ್ಯವೇ ಇರಬಹುದು. ಆದರೆ, ಬೃಹತ್ ಆಣೇಕಟ್ಟೆಗಳ ಪರಿಣಾಮ ಜನ, ನೆಲ, ಅರಣ್ಯಗಳ ಮುಳುಗಡೆಗೆ ಹೊಂದಿಕೊಂಡಿರಬಹುದು, ಆದರೆ ಸಮಸ್ಯೆ ಅಷ್ಟಕ್ಕೆ ಸೀಮಿತವಾಗಿಲ್ಲ. ಈ ಅಭಿವೃದ್ಧಿ ಮಾಧರಿಯ ರಾಜಕೀಯ ಹಿನ್ನೆಲೆ, ತಂತ್ರ, ಕುತಂತ್ರಗಳೆಲ್ಲವು ಇಲ್ಲಿ ಮುಖ್ಯ, ಹಾಗೇ ಪರ್ಯಾಯ ವ್ಯವಸ್ಥೆ ಇವೆಲ್ಲಕ್ಕಿಂತಲು ಮುಖ್ಯ ಎಂದು ನನಗನ್ನಿಸಿದರಿಂದ ಈ ರೀತಿ ಪ್ರತಿಕ್ರಿಯಿಸಬೇಕಾಯ್ತು. ಹಾಗೇ ಪ್ರಕೃತಿಯ ವಿಕೋಪ, ಮಾರುಕಟ್ಟೆಯ ಹೊಡೆತ, ಜಾಗತೀಕರಣದ ಬಿರುಗಾಳಿಗೆ ಸಿಕ್ಕಿ ತಲೆ ಎತ್ತಲಾರದೆ ನಡುಕದಿಂದ ಒದ್ದಾಡುತ್ತಿರುವ ಭಾರತೀಯ ರೈತನಿಗೆ ಈ ಎಲ್ಲಾ ಜಿಜ್ಞಾಸೆಗಳಿಗಿಂತ, ತನ್ನ ಬೆಳಗೆ 'assured water' ಬಹುಮುಖ್ಯ ಎನಿಸಿದ್ದು ಆತನನ್ನೇ ಕೇಂದ್ರೀಯವಾಗಿಟ್ಟು ಯೋಚಿಸಿದಲ್ಲಿ, ನನ್ನ ವಾದ ಸ್ವಲ್ಪ ಅರಿವಾಗಬಹುದು. ಇನ್ನು ರೈತರ ಬಗ್ಗೆ ಹೀಗೆ ಅನುಕಂಪ ತೋರಿಸುವ ನನ್ನಂತಹವರೆಲ್ಲಾ, ಹಾಗೇ ಹಿ.ಗಿ.ದಂತಹ ಪತ್ರಿಕೆಯೂ ಕೂಡ ಹೊರಗಿನವರೇ ಎಂಬ ನಿಮ್ಮ ಅಭಿಪ್ರಾಯ ಸತ್ಯವೇ. ಹಾಗಾಗಿ, ಹಿತ್ತಲಗಿಡ "ಒಳಗಿನಿಂದಲೇ, ಒಳಗಿನವರಿಂದಲೇ" –'Endogenous Development'– ಅಭಿವೃದ್ಧಿ ಮಾದರಿಯೊಂದನ್ನು ಹುಟ್ಟು ಹಾಕುವ ಪ್ರಯತ್ನವಾಗಿದ್ದು "Transfer of Technology Concepts"ಗಳನ್ನು ಪೂರ್ತಿ ಒಪ್ಪಲಾರದು ಎಂಬುದು ನಮ್ಮ ಅಭಿಪ್ರಾಯ.

ಪ್ರಕಾಶ್ ಕಮ್ಮರಡಿ.

ಮಾನ್ಯರೆ,

ನರ್ಮದಾ ಕಣಿವೆಯದು ಮಾತ್ರವಲ್ಲ ನಮ್ಮ ಕೇರಳದ ಮಾಪೂರ್ ರೇಯಾನ್ ಕಾರ್ಖಾನೆ ವಿವಾದದಂತಹ ಕಣ್ಣಿಗೆ ಕಾಣುವ ನಾಶ ಎದುರಿರುವ ಕೆಲವು ಪರಿಸರ ಸಂಬಂಧಿ ಚಳೂವಳಿಗಳು, ಆಡಳಿತ ಮತ್ತು ವ್ಯವಸ್ಥೆಗಳ ನೀವು ತಿಳಿಸಿದಂತಹ ಸ್ಥಾಪಿತ ಹಿತಾಸಕ್ತಿ ಮತ್ತು ಅರ್ಧಸತ್ಯ ಪ್ರಸರಿಸುವ ಸತ್ತ ಯತ್ನಗಳಿಂದಾಗಿ ಬಹುಸಂಖ್ಯಾತರ ಒಲವು ಪಡೆದೇ ಇಲ್ಲ. ಪರ್ಯಾಯದ ಚಿಂತನೆ. ಪ್ರಚಾರ ಬೇಕೆನ್ನುವುದು ಖಂಡಿತಾ ಸರಿ.

ಶ್ರೀ ಪಡ್ರೆ, ವಾಣಿನಗರ, ವಯ: ಪೆರ್ಲ, ಕೇರಳ

ಮಾನ್ಯರೆ,

"ಕಣ್ಣೀರಿದ್ದರೆ ಸುರಿಸಲು ತಯಾರಾಗಿ" ಹೊತ್ತು ತಂದ ಪತ್ರಿಕೆ ಕೈಗೆ ತೆಗೆದುಕೊಂಡ ತಕ್ಷಣವೆ ನನ್ನ ಕಣ್ಣುಗಳು ಪ್ರತಿಕ್ರಿಯಿಸಿದವು. ಇಲ್ಲಿ ನಮ್ಮ ಮುಗ್ಧ ಜನರಿಗೆ ಸಂತೋಷದ ಸಂಗತಿಯಾಗಿರಬಹುದು. ಹಾಗೆ ಈ ಬೇಟೆ ಹಿಂದಿನ ವಿಕೃತ ಮನಸ್ಸುಗಳ ಪ್ರೋತ್ಸಾಹವು ಕೂಡ ಹೆಚ್ಚಿನ

ಪತ್ರಿಕೆ ನೊಂದಣಿ ಸಂಖ್ಯೆ 66842/96

ತೆರದ ಅಂಚೆ

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.40/-	ರೂ.400/-
ರೈತರು	ರೂ.50/-	ರೂ.500/-
ಇತರರು	ರೂ.60/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. : ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O) ಅಥವಾ ಡ್ರಾಫ್ಟ್ / ಚೆಕ್ ಮೂಲಕ *"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"* ಈ ವಿಳಾಸಕ್ಕೆ ಕುಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು.
ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ವಿಳಾಸ :
ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು–560 065.
✆ :8563535 \ 3330153 Ext.297 (O) 8560267 (R)
e.mail: hittalu @ bgl.vsnl.net.in

ಗೆ, ______________________

____

____

____

Printed by Sri.S.Sridhar, Published by Smt.K.Meenakshi (Owner). printed at "Navabharath Enterprises" No.10, Sirur Park 'B' Street, Sheshadripuram, Bangalore - 560 020. and Published at No.399, 14-B Cross New Town Yelahanka, Bangalore - 560 064. Edited by Dr.T.N.Prakash.